ಪ್ರಸ್ತಾವ ಮಂಡಿಸಲ್ಪಟ್ಟಿತು

ಶ್ರೀ ಎ. ರಾಮದಾಸ್:- ಮಾನ್ಯ ಅಧ್ಯಕ್ಷರೇ, ಅಜೆಂಡಾ ತಾವು ಹೋಗುತ್ತೀರೆಂದು ನಾವು ಸಭೆಯಲ್ಲಿ ಕುಳಿತಿದ್ದೇವೆ. ಬೇಕಾದರೆ ಸ್ಲಂ ಬಗ್ಗೆ ನಾಳೆ ತೆಗೆಸಿಕೊಳ್ಳುತ್ತೇವೆ ಅಂದರೆ ನಮ್ಮ ಅಭ್ಯಂತರವಿಲ್ಲ. ಆದರೆ ನಾನು ಆಗಲೇ ತಮ್ಮ ಅಪ್ಪಣೆ ಕೇಳಿದ್ದೆ. ಹದಿನೈದು ನಿಮಿಷಗಳ ಕಾಲಾವಕಾಶ ಇದೆ ಎಂದು ತಾವು ಹೇಳಿದ್ದರಿಂದ ನಾವು ಇಲ್ಲಿ ಕುಳಿತಿದ್ದೇವೆ.

ಗೊಂದಲ

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೇ, ಅಜೆಂಡಾ ಪ್ರಕಾರ ಈಗ ಕರ್ನಾಟಕ ಕೊಳಚೆ ಪ್ರದೇಶದ ಬಗ್ಗೆ ತಿದ್ದುಪಡಿಯಿದೆ. ಮಾನ್ಯ ಸಗೀರ್ ಅಹಮದ್‌ರವರು ಅದನ್ನು ಮಂಡಿಸಬೇಕು. ನಮ್ಮ ಅಂಡರ ಸ್ಟ್ಯಾಂಡಿಂಗ್ ಅಂದರೆ ದಿನಕ್ಕೆ 4 ಬಿಲ್‌ಗಳನ್ನು ತೆಗೆದುಕೊಳ್ಳಬೇಕು. ಈಗ 3 ಬಿಲ್‌ಗಳು ಪಾಸ್ ಆಗಿವೆ. ನಾವು 4-5 ಬಿಲ್‌ಗಳನ್ನಷ್ಟೇ ನಾವು ನೋಡಿಕೊಂಡು ಬಂದಿದ್ದೇವೆ. ಇಲ್ಲಿ ಫಸ್ಟ್ ಕರ್ನಾಟಕ ಕೊಳಚೆ ಪ್ರದೇಶಕ್ಕೆ ಸಂಬಂಧಪಟ್ಟ ಮಸೂದೆ ಇದೆ.

ಅಧ್ಯಕ್ಷರು:- ಇವರದ್ದು ಮೊದಲು ಆಗಲೀ ಆ ಮೇಲೆ ನಿಮ್ಮದನ್ನು ತೆಗೆದುಕೊಳ್ಳೀರಿ

ಶ್ರೀ ಆರ್.ವಿ ದೇಶಪಾಂಡೆ:- ಇದು ಇವತ್ತು ಎರಡು ಮೂರನೇ ಬಿಲ್ ಬರಬೇಕಾಗಿತ್ತು. ನಿನ್ನೆಯ ಅಜೆಂಡಾ ತೆಗೆದುಕೊಂಡು ನೋಡಿ. ನನಗೇನು ಗಡ್‌ಬಡ್ ಇಲ್ಲ. ಸ್ಪೀಕರ್ ಏನು ಹೇಳುತ್ತಾರೋ ಆದಕ್ಕೆ ವಿರುದ್ಧವಾಗಿ ನಾನು ಹೋಗುವುದಿಲ್ಲ. ಈ ಬಿಲ್ಲನ್ನು ನಾನು ಕಳೆದ ಸದನದಲ್ಲೇ ಮಂಡಿಸಿದ್ದೇನೆ. ಕಳೆದ 8 ದಿವಸದ ನಿರಂತರ ಅಜೆಂಡಾದಲ್ಲಿ ಇದು ಬಂದಿದೆ. ಇದರ ಬಗ್ಗೆ ವಿರೋಧ ಪಕ್ಷದ ನಾಯಕರಲ್ಲಿ ಮತ್ತು ಮಾನ್ಯ ಸಿಂಧ್ಯಾರವರಲ್ಲೂ ರಿಕ್ವೆಸ್ಟ್ ಮಾಡಿದ್ದೇನೆ ಇಷ್ಟು ಮೀರಿನೂ ನೀವು ತೆಗೆದುಕೊಳ್ಳಬಾರದು ಅಂದರೆ ನನ್ನದೇನೂ ಅಭ್ಯಂತರವಿಲ್ಲ.

ಅಧ್ಯಕ್ಷರು: ನಾಳೆ ನೂರಕ್ಕೆ ನೂರು ಇದನ್ನು ತೆಗೆದುಕೊಳ್ಳೋಣ.

ಎ) ಪರ್ಯಾಲೋಚನಾ ಪ್ರಸ್ತಾವ

ಕರ್ನಾಟಕ ಕೊಳಚೆ ಪ್ರದೇಶಗಳ (ಮೇಲ್ಪಾಟು ಮತ್ತು ನಿರ್ಮೂಲನಾ) ಮತ್ತು ಇತರ ಕೆಲವು ಕಾನೂನುಗಳ (ತಿದ್ದುಪಡಿ) ವಿಧೇಯಕ, 2002.

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಸಿ.ಆರ್. ಸಗೀರ್ ಅಹಮದ್(ವಸತಿ ಸಚಿವರು):- ಮಾನ್ಯ ಅಧ್ಯಕ್ಷರೇ, "ವಿಧಾನಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2002ರ ಕರ್ನಾಟಕ ಕೊಳಚೆ ಪ್ರದೇಶಗಳ (ಮೇಲ್ಪಾಟು ಮತ್ತು ನಿರ್ಮೂಲನಾ) ಮತ್ತು ಇತರ ಕೆಲವು ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲ್ಪಟ್ಟಿತು

ಶ್ರೀ ಸಿ.ಆರ್. ಸಗೀರ್ ಅಹಮದ್ (ವಸತಿ ಸಚಿವರು):- ಮಾನ್ಯ ಅಧ್ಯಕ್ಷರೇ, ಈ ತಿದ್ದುಪಡಿ ತರುವಂತಹ ಉದ್ದೇಶವೆಂದರೆ, ನಾವು ರಾಜ್ಯಾದ್ಯಂತ ಗುರ್ತಿಸಿರುವ ಕೊಳಚೆ ಪ್ರದೇಶಗಳಲ್ಲಿ 31,000 ಮನೆಗಳನ್ನು ನಿರ್ಮಿಸಿದ್ದೇವೆ. ಕೊಳಚೆ ಪ್ರದೇಶದ ನಿವಾಸಿಗಳಿಗೆ ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ಒಂದು ಹೊಸ ಯೋಜನೆಯನ್ನು ಹಮ್ಮಿಕೊಳ್ಳುವ ಮುಖಾಂತರ 10,312 ಮನೆಗಳನ್ನು ನಾವು ನಿರ್ಮಿಸಬೇಕಾಗಿದೆ. ಈ ರೀತಿ ಮನೆ

ಪಡೆದುಕೊಳ್ಳುವವರಿಗೆ ಮನೆ ಅಥವಾ ನಿವೇಶನಗಳ ಪತ್ರ ನೀಡಲು ಈ ಕಾನೂನಿನಲ್ಲಿ ಅವಕಾಶವಿರುವುದಿಲ್ಲ. ಆ ಅವಕಾಶ ಒದಗಿಸಿಕೊಡುವ ಬಗ್ಗೆ ಈ ತಿದ್ದುಪಡಿಯನ್ನು ತಂದಿದ್ದೇನೆ.

ಭಾರತ ಸರ್ಕಾರ 1994ರಲ್ಲಿ "ರಾಷ್ಟ್ರೀಯ ವಸತಿ ನೀತಿ"ಯನ್ನು ಹಮ್ಮಿಕೊಂಡಿರುವ ಈ ಸಂದರ್ಭದಲ್ಲಿ ಕೊಳಚೆ ಪ್ರದೇಶಗಳನ್ನು ಉನ್ನತೀಕರಿಸುವಂತೆ ಮತ್ತು ಪ್ರಗತಿಪರ ವಸತಿ ನೀತಿಯ ಮೂಲಕ ಕೊಳಚೆ ಪ್ರದೇಶಗಳ ಅಭಿವೃದ್ಧಿ ಕೈಗೊಳ್ಳುವಂತೆ ಸೂಚಿಸಿರುವ ಹಿನ್ನೆಲೆಯಲ್ಲಿ ನಾವು ಈ ತಿದ್ದುಪಡಿಯನ್ನು ತಂದಿದ್ದೇವೆ.

ಸ್ವಾತಂತ್ರ್ಯ ನಂತರ ಮೊಟ್ಟ ಮೊದಲ ಬಾರಿಗೆ ಕರ್ನಾಟಕ ಸರ್ಕಾರ ಕೊಳಚೆ ಪ್ರದೇಶಾಭಿವೃದ್ಧಿಗೆ ಬೃಹತ್ ಕಾರ್ಯಕ್ರಮ "ನಿರ್ಮಲ ಜ್ಯೋತಿ" ಕಾರ್ಯಕ್ರಮ ಕೈಗೆತ್ತಿಕೊಂಡಿದ್ದು, 21 ಪ್ರಥಮ ದರ್ಜೆ ನಗರಗಳಲ್ಲಿ 985 ಘೋಷಿತ ಕೊಳಚೆ ಪ್ರದೇಶಗಳ ಅಭಿವೃದ್ಧಿಗೆ 753 ಕೋಟಿ ರೂ. ವೆಚ್ಚ ಮಾಡುವ ಮೂಲಕ ನಾವು ಈ ತಿದ್ದುಪಡಿಯನ್ನು ತಂದಿದ್ದೇವೆ.

ಕೇಂದ್ರ ಸರ್ಕಾರ ಇತ್ತೀಚೆಗೆ ಕೊಳಗೇರಿ ನಿವಾಸಿಗಳಿಗೆ ಮನೆ ನೀಡಲು "ವಾಲ್ಮೀಕಿ - ಅಂಬೇಡ್ಕರ್ ವಸತಿ ಯೋಜನೆ" ಎಂಬ ಕಾರ್ಯಕ್ರಮವನ್ನು ರಾಜ್ಯ ಸರ್ಕಾರ ಕೊಳಚೆ ನಿರ್ಮೂಲನಾ ಮಂಡಳಿ ಮೂಲಕ ಜಾರಿಗೊಳಿಸುತ್ತಿದೆ. ರಾಜ್ಯದ 93 ಕೊಳಚೆ ಪ್ರದೇಶಗಳಲ್ಲಿ 10312 ಮನೆಗಳನ್ನು 28.92 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗುತ್ತಿದೆ. ಈ ಯೋಜನೆಗೆ ಕೇಂದ್ರ ಸರ್ಕಾರದ ಧನಸಹಾಯವಾಗಿ 14.46 ಕೋಟಿ ರೂ. ಒದಗಿಸಿದೆ. ರಾಜ್ಯ ಸರ್ಕಾರ ಸಹ ತನ್ನ ಪಾಲಿನ 14.46 ಕೋಟಿ ರೂ. ಹಣ ಒದಗಿಸಿದೆ.

ಕೊಳಚೆ ಪ್ರದೇಶಗಳ ವಾಸಿಗಳು ಸಶಕ್ತವಾದ ಅಭಿವೃದ್ಧಿ ಹೊಂದಬೇಕೆಂಬ ದೃಷ್ಟಿಯಿಂದ ಮತ್ತು ಕೇಂದ್ರ ಸರ್ಕಾರದ ವಸತಿ ನೀತಿಯಂತೆ ಮಾಲೀಕತ್ವದ ಹಕ್ಕನ್ನು ನೀಡುವ ದೃಷ್ಟಿಯಿಂದ ಕೊಳಚೆ ನಿವಾಸಿಗಳಿಗೆ ನೀಡುವ ನಿವೇಶನ/ಮನೆ/ಮನೆ ಸಮುಚ್ಚಾಯಕ್ಕೆ ಹಕ್ಕನ್ನು ನೀಡುವ ಅಗತ್ಯ ಇದೆ ಎಂದು ಸರ್ಕಾರಕ್ಕೆ ಮನವರಿಕೆಯಾಗಿರುವುದರಿಂದ ಈ ಉದ್ದೇಶದ ಹಿನ್ನೆಲೆಯಲ್ಲಿ ಕಾಯ್ದೆಯ ವಿಧಿ 27ಕ್ಕೆ ತಿದ್ದುಪಡಿ ತರುವುದಕ್ಕಾಗಿ ಹೊಸವಿಧಿ 27Aನ್ನು ಕರ್ನಾಟಕ ಕೊಳಚೆ ಪ್ರದೇಶಗಳ (ಅಭಿವೃದ್ಧಿ ಮತ್ತು ನಿರ್ಮೂಲನ) ಕಾಯ್ದೆ 1973ಕ್ಕೆ ಸೇರಿಸಲು ಪ್ರಸ್ತಾಪಿಸಲಾಗಿದೆ. ಕಾಯ್ದೆಯ ವಿಧಿ 27ಕ್ಕೆ ತಿದ್ದುಪಡಿ ತರುತ್ತಿರುವುದರಿಂದ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರಗಳು/ಸಂಸ್ಥೆಗಳಿಗೆ ಸೇರಿದ ಜಮೀನಿನಲ್ಲಿ ಕೊಳಚೆ ಪ್ರದೇಶವಿದ್ದಲ್ಲಿ, ಈ ಕೊಳಚೆ ಪ್ರದೇಶದ ಅಭಿವೃದ್ಧಿ ಮಾಡಲು ಮತ್ತು ಮನೆಗಳ ಕಟ್ಟಡ ಇತ್ಯಾದಿ ನಿರ್ಮಿಸಲು ಅವಕಾಶಮಾಡಿಕೊಡಬೇಕಾದ್ದರಿಂದ ಕೊಳಚೆ ಪ್ರದೇಶವಿರುವ ಜಮೀನಿನ ಮಾಲೀಕತ್ವವನ್ನು ಕೊಳಚೆ ನಿರ್ಮೂಲನಾ ಮಂಡಳಿಗೆ ವರ್ಗಾಯಿಸುವ ಅಗತ್ಯವಿದೆ.

ಹೊಸವಿಧಿ 27Aಯನ್ನು ಜಾರಿಗೊಸಳಿಸುವುದರಿಂದ ಕೊಳಚೆ ಪ್ರದೇಶ ಅಭಿವೃದ್ಧಿಗೊಳಿಸಲು ಕೊಳಚೆ ನಿರ್ಮೂಲನಾ ಮಂಡಳಿಗೆ ಶಾಸನಬದ್ಧ ಅಧಿಕಾರ ಲಭ್ಯವಾಗುತ್ತದೆ. ಇದಲ್ಲದೆ ಕೊಳಚೆ ನಿವಾಸಿಗಳಿಗೆ ವಿತರಿಸಿದ ನಿವೇಶನ/ಮನೆಯ ಮಾಲೀಕತ್ವವನ್ನು ಕೊಳಚೆ ನಿವಾಸಿಗಳಿಗೆ ಗುತ್ತಿಗೆ/ಹಂಚಿಕೆ/ಮಾರಾಟ ಮಾಡಲು ಅವಕಾಶ ನೀಡುತ್ತದೆ.

ಗೌರವಾನ್ವಿತ ಸದಸ್ಯರುಗಳಿಗೆ ತಿಳಿದಿರುವಂತೆ ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ ಹಲವಾರು ಸಂಸ್ಥೆಗಳಿಂದ ಸಾಲ ಪಡೆಯುತ್ತಿದ್ದು ಪಡೆದ ಸಾಲವನ್ನು ಮರು ಪಾವತಿ ಮಾಡಬೇಕಾಗುತ್ತದೆ. ಈಗ ಇರುವ ಕಾಯ್ದೆಯಲ್ಲಿ ಮಂಡಳಿಗೆ ಬರಬೇಕಾದ ಬಾಕಿ ವಸೂಲಿ

ಮಾಡಲು ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಬೇಕಾಗುತ್ತದೆ. ಆದ್ದುದರಿಂದ ಕಾಯ್ದೆಗೆ ವಿಧಿ 27Bಯನ್ನು ಸೇರ್ಪಡೆ ಮಾಡಲು ಪ್ರಸ್ತಾಪಿಸಲಾಗಿದೆ. ಇದರಿಂದಾಗಿ ಕೊಳಚಿ ನಿರ್ಮೂಲನಾ ಮಂಡಳಿಗೆ ಫಲಾನುಭವಿಯಿಂದ ಬರಬೇಕಾದ ಬಾಕಿ ವಸೂಲಿ ಮಾಡಿಕೊಳ್ಳಲು ತಗಾದೆ ನೋಟೀಸು ನೀಡಿ ವಸೂಲಿ ಮಾಡುವ ಅಧಿಕಾರ ಪ್ರಾಪ್ತವಾಗುತ್ತದೆ. ಈ ಆದರೆ ಯಾರೇ ಸುಸ್ತಿದಾರ ತನಗೆ ನೀಡಿದ ತಗಾದೆ ನೋಟೀಸಿಗೆ ತಕರಾರು ಎತ್ತಿದ ಸಂದರ್ಭದಲ್ಲಿ ತಾಗಾದೆ ನೋಟೀಸು ವಿರುದ್ಧ ಮೇಲ್ಮನವಿ ಸಲ್ಲಿಸಲು 30 ದಿನಗಳ ಕಾಲಾವಕಾಶ ಸಹ ನೀಡಲಾಗಿದೆ. ಈಗಾಗಲೇ ನಾನು ತಿಳಿಸಿರುವಂತೆ ಕರ್ನಾಟಕ ಕೊಳಚಿ ನಿರ್ಮೂಲನಾ ಮಂಡಳಿ ಹಲವಾರು ಬೃಹತ್ ಯೋಜನೆಗಳನ್ನು ಕೊಳಚಿ ಪ್ರದೇಶಗಳಿಗೆ ಮೂಲ ಸೌಲಭ್ಯ ಒದಗಿಸಲು ಮತ್ತು ಕೊಳಚಿ ಪ್ರದೇಶದ ವಾಸಿಗಳಿಗೆ ತರಬೇತಿ ನೀಡುವ ದೃಷ್ಟಿಯಿಂದ ರಾಜ್ಯದ 21 ಮೊದಲ ದರ್ಜೆ ನಗರಗಳಲ್ಲಿನ ಘೋಷಿತ 985 ಕೊಳಗೇರಿಗಳಲ್ಲಿ 753 ಕೋಟಿ ರೂ. ವೆಚ್ಚದಲ್ಲಿಕಾರ್ಯಕ್ರಮ ಹಮ್ಮಿಕ್ಕೊಳ್ಳಲಾಗಿದೆ. ಜಪಾನ್ ಬ್ಯಾಂಕ್ ಆಫ್ ಇಂಟರ್‌ನ್ಯಾಷನಲ್ ಕೋ-ಆಪರೇಶನ್ ಸಂಸ್ಥೆಯಿಂದ ಸಹ 1250 ಕೋಟಿ ರೂ. ನಷ್ಟು ನೆರವು ಪಡೆದು ಅಭಿವೃದ್ಧಿ ಪಡಿಸುವ ಕಾರ್ಯಕ್ರಮ ಹಮ್ಮಿಕ್ಕೊಂಡಿದೆ. ಧನ ಸ್ವಾಮಿ, ಸೆಕ್ಷನ್ 27ಎ ಮತ್ತು ಸೆಕ್ಷನ್ 27ಬಿ ಅಡಿಯಲ್ಲಿ ಏನೇನು ತಿದ್ದುಪಡಿ ತಂದಿದ್ದೇವೆ ಎಂಬ ಬಗ್ಗೆ ವಿವರಣೆ ನೀಡುತ್ತಿದ್ದೇನೆ. ನಾನು ಹೇಳಿದ ಹಾಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಹಾಯದೊಂದಿಗೆ ಸೆಕ್ಷನ್ 23 ಬದಲಾವಣೆ ಆಗಬೇಕು. ಇಲ್ಲಿಯವರೆಗೆ ಕೊಳಚಿ ನಿವಾಸಿಗಳು ಏನು ವಾಸಿಸುತ್ತಿದ್ದರು ಆ ಸ್ಥಳವನ್ನು ನಾವು ಗುರ್ತುಚೀಟಿ ಕೊಡುವ ಮೂಲಕ ಗುರ್ತಿಸಿದ್ದೇವೆ. ಈಗ ಹೊಸ ಕಾರ್‍ಯಕ್ರಮ ವ್ಯಾಂಬಿ ಎಂದು (ವಾಲ್ಮೀಕಿ ಅಂಬೇಡ್ಕರ್ ಯೋಜನೆ) ಹೊಸ ಕಾರ್‍ಯಕ್ರಮವನ್ನು ಏನು ನಾವು ಚಾಲನೆಗೆ ತಂದಿದ್ದೇವೆ. ಈ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರುವುದರ ಬಗ್ಗೆ ಕೊಳಚಿ ಪ್ರದೇಶದ ನಿವಾಸಿಗಳಿಗೆ ಹಕ್ಕುಪತ್ರವನ್ನು ನೀಡುವುದರ ಮುಖಾಂತರ, ಅವರಿಗೆ ಸಾಲದ ರೂಪದಲ್ಲಿ ಮನೆಗಳನ್ನು ನಿರ್ಮಿಸಿಕೊಡುವುದರ ಮುಖಾಂತರ ಶೇಕಡ 50ರಷ್ಟು ಕೇಂದ್ರ ಸರ್ಕಾರ ಸಹಾಯಧನ ನೀಡುತ್ತಿರುವ ಸಂದರ್ಭದಲ್ಲಿ, ಶೇ. 50 ರಷ್ಟು ರಾಜ್ಯಸರ್ಕಾರವು ಸಾಲದ ರೂಪದಲ್ಲಿ ಅವರಿಗೆ ಸಾಲ ಒದಗಿಸಿಕೊಡುವ ಸಂದರ್ಭದಲ್ಲಿ ಮನೆಗಳನ್ನು ಕಟ್ಟಿಕೊಟ್ಟು ನಂತರ ಆ ಹಣವನ್ನು ವಸೂಲಿ ಮಾಡುವ ಬಗ್ಗೆ ಕೆಲವು ತಿದ್ದುಪಡಿಗಳನ್ನು ತಂದಿದ್ದೇವೆ. ಅವರು ಮನೆಗಳನ್ನು ಕಟ್ಟಿಕೊಂಡಿರುವ ಸಂದರ್ಭದಲ್ಲಿ ಅವರಿಗೆ ಹಕ್ಕುಪತ್ರವನ್ನು ಕೊಡುವುದರ ಮುಖಾಂತರ ಅಥವಾ ಸ್ವಾಧೀನ ಪತ್ರವನ್ನು ಕೊಡುವುದರ ಮುಖಾಂತರ ನಮ್ಮ ಕಾನೂನಿನ ಸೆಕ್ಷನ್ 27ರಲ್ಲಿ ಕೆಲವು ತಿದ್ದುಪಡಿಗಳನ್ನು ತಂದಿದ್ದೇವೆ. ಆದ್ದರಿಂದ ರಾಜ್ಯಾದ್ಯಾಂತ 21 ಬಹು ನಗರಗಳಲ್ಲಿ ಈ ಯೋಜನೆಯನ್ನು ಚಾಲನೆಗೆ ತರುವುದರ ಮುಖಾಂತರ ನಾವು ಈ ನಿವಾಸಿಗಳಿಗೆ ವಸತಿ ಅನುಕೂಲವನ್ನು ಒದಗಿಸಿಕೊಡುವಂಥದ್ದರ ಬಗ್ಗೆ ಈ ತಿದ್ದುಪಡಿಗಳನ್ನು ತಂದಿದ್ದೇವೆ. ದಯಮಾಡಿ ತಾವು ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಹೇಳಿ ಅಧ್ಯಕ್ಷರ ಮುಖಾಂತರ ತಮ್ಮೆಲ್ಲರನ್ನೂ ನಾನು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸಚಿವರಾದ ಶ್ರೀ ಸಗೀರ್ ಅಹಮದ್‌ರವರು ಆ ಸ್ಲಮ್ ಏರಿಯಾಸ್ ಇಂಪ್ರೂವ್ ಮೆಂಟ್ ಅಂಡ್ ಕ್ಲಿಯರೆನ್ಸ್ ಈ ಕಾನೂನೇನು ಇದೆ. ಅದಕ್ಕೆ ಕೆಲವೊಂದು ಸೆಕ್ಷನ್‌ಗಳ ಬಗ್ಗೆ ತಿದ್ದುಪಡಿಗಳನ್ನು ತೆಗೆದುಕೊಂಡು ಬಂದಿದ್ದಾರೆ. ಈ ತಿದ್ದುಪಡಿ ವಿಚಾರವಾಗಿ ಹೇಳುವಂಥ ಸಂದರ್ಭದಲ್ಲಿ ಮಾನ್ಯ ಸಗೀರ್ ಅಹಮದ್‌ರವರು ಈ ತಮ್ಮ ಒಂದು ಕೊಳಚಿ ನಿರ್ಮೂಲನಾ

ಮಂಡಳಿಯಿಂದ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ ಎನ್ನುವ ಬಗ್ಗೆಯೂ ಕೆಲವೊಂದು ವಿವರಣೆಗಳನ್ನು ಕೊಟ್ಟರು. ನನಗೊಂದು ವ್ಯಥೆ ತರುವ ವಿಷಯವೆಂದರೆ, ಈ ಒಂದು ಕೊಳಚೆ ನಿರ್ಮೂಲನ ಮಂಡಳಿಯ ಬಗ್ಗೆ ಬಹುಶಃ ನನಗೆ ಅಂಕಿಸಂಖ್ಯೆಗಳನ್ನು ಕೊಟ್ಟರೆ ಬಹಳ ಒಳ್ಳೆಯದಾಗುತ್ತದೆ. ಕಳೆದ ಎರಡೂವರೆ-ಮೂರು ವರ್ಷಗಳಿಂದ ಯಾವ ಯಾವ ಸ್ಲಮ್‌ಗೆ ಎಷ್ಟೆಷ್ಟು ನೀವು ಇಂಪ್ರೂಮ್‌ಮೆಂಟ್ ಸಲುವಾಗಿ ಹಣವನ್ನು ಮಂಜೂರು ಮಾಡಿದ್ದೀರಿ ಎಂದು ಹೇಳಿದರೆ ಬಹಳ ಒಳ್ಳೆಯದಾಗುತ್ತದೆ. ನನ್ನ ಒಂದು ಮಾಹಿತಿ ಪ್ರಕಾರ ಕೊನೆಯ ಪಕ್ಷ ಒಂದೊಂದು ವರ್ಷಕ್ಕೆ ನಾಲ್ಕೈದು ಲಕ್ಷ ರೂಪಾಯಿಗಳೂ ಕೂಡ ಒಂದೊಂದು ವಿಧಾನಸಭಾ ಕ್ಷೇತ್ರಕ್ಕೆ ಬಂದಿಲ್ಲ. ಎಲ್ಲೆಲ್ಲಿ ಕೊಳಚೆ ಪ್ರದೇಶಗಳು ಇವೆ, ಅವುಗಳ ಇಂಪ್ರೂವ್‌ಮೆಂಟ್ ಸಲುವಾಗಿ ಕೊನೆಯ ಪಕ್ಷ ಕನಿಷ್ಟ 4-5 ಲಕ್ಷ ರೂ.ಗಳನ್ನು ಕೊಟ್ಟಿಲ್ಲ. ಹಿಂದೆ ಜನತಾ ದಳದ ಸರ್ಕಾರವಿದ್ದಾಗ ಪ್ರತಿವರ್ಷ ನಾವು ಐದೈದು ಲಕ್ಷ ರೂಪಾಯಿಗಳನ್ನು ತೆಗೆದುಕೊಳ್ಳುತ್ತಿದ್ದೆವು. ಒಂದೊಂದು ಸ್ಲಂ ಇಂಪ್ರೂವ್‌ಮೆಂಟ್ ಮಾಡುತ್ತಿದ್ದೆವು. ಏನೋ ಒಳಚರಂಡಿ ಮಾಡುತ್ತಿದ್ದೆವು. ಏನೋ ಗಟರ್ ಮಾಡುತ್ತಿದ್ದೆವು. ರಸ್ತೆ ಮಾಡುತ್ತಿದ್ದೆವು. ಆದರೆ ಕಳೆದ ಎರಡೂವರೆ ವರ್ಷದಿಂದ ನನ್ನ ಗಮನಕ್ಕೆ ಬಂದ ಹಾಗೆ ಒಂದು ಪೈಸೆ ಹಣ ಸಹ ಬಿಡುಗಡೆಯಾಗಿಲ್ಲ. ಹಾಗಾದರೆ ಸ್ಲಂ ಬೋರ್ಡ್ ಏನು ಮಾಡುತ್ತಿದೆ ಎಂದು ನಾವು ಇವತ್ತು ವಿಚಾರ ಮಾಡಬೇಕಾಗುತ್ತದೆ. ಈಗ ತಾವು ವಾಲ್ಮೀಕಿ ಅಂಬೇಡ್ಕರ್ ಅವಾಸ್ ಯೋಜನೆ ಬಗ್ಗೆ ಏನು ಹೇಳಿದಿರಿ, ಅದು ಕೇಂದ್ರ ಸರ್ಕಾರ ಪ್ರಾರಂಭ ಮಾಡಿದಂಥ ಯೋಜನೆ. 50 ಪರ್‌ಸೆಂಟ್ ಸಬ್ಸಿಡಿ ಕೊಡುತ್ತಾರೆ. ಇನ್ನು 50 ಪರ್‌ಸೆಂಟ್ ಕೇಂದ್ರ ಸರ್ಕಾರ ಹುಡ್ಕೋ ಲೋನನ್ನು ಕೊಡುತ್ತಾರೆ. ರಾಜ್ಯಸರ್ಕಾರದ ಕಾಂಟ್ರಿಬ್ಯೂಷನ್ ಏನೂ ಇಲ್ಲ. ಆ ಸಾಲವನ್ನು ವಸೂಲು ಮಾಡುವುದಷ್ಟೇ ನಿಮ್ಮ ಕೆಲಸ. ಹಾಗಾದರೆ ಸ್ಲಂ ಬೋರ್ಡ್‌ನವರು ನೀವು ಯಾವ ಸ್ಲಂಅನ್ನು ಇಂಪ್ರೂವ್‌ಮೆಂಟ್ ಮಾಡುವುದಕ್ಕೆ ಹೋರಟಿದ್ದೀರಿ? ಎಷ್ಟು ಹಣವನ್ನು ಕೊಟ್ಟಿದ್ದೀರಿ? ಆ ಮಾಹಿತಿಯನ್ನು ಮೊದಲು ಕೊಡಿ. ಏಕೆಂದರೆ ನೀವು ಆ್ಯಕ್ಟ್‌ನ ಅಮೆಂಡ್‌ಮೆಂಟ್ ಕೂಡ, ನಿಮ್ಮ ಕಲ್ಯಾಣಕಾರಿ ಕಾರ್ಯಕ್ರಮಗಳನ್ನು ನೀವು ಏನೇನು ಮಾಡಿದ್ದೀರಿ ಎಂದು ಹೇಳಿದಿರಿ. ಆದರೆ ಎಷ್ಟು ಹಣವನ್ನು ಖರ್ಚುಮಾಡಿದಿರಿ? ಪ್ರತಿ ವರ್ಷಕ್ಕೆ ಎಷ್ಟು ನಿಮ್ಮ ರಾಜ್ಯದಲ್ಲಿರುವಂತ ಸ್ಲಂ ಇಂಪ್ರೂವ್‌ಮೆಂಟ್ ಮಾಡಿದ್ದೀರಿ. ಏಕೆಂದರೆ ಲಕ್ಷಾಂತರ ಕೋಟ್ಯಾಂತರ ಜನರು ಬಡವರು, ದೀನ ದಲಿತರು ಇವತ್ತು ಆ ಸ್ಲಂಗಳಲ್ಲಿದ್ದಾರೆ. ಅದರ ಬಗ್ಗೆ ಏನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ? ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ? ಅದರ ಬಗ್ಗೆ ಸ್ಪಷ್ಟೀಕರಣವನ್ನು ತಾವು ಕೊಡಬೇಕಾಗುತ್ತದೆ. ಅಂದರೆ ನಿಮ್ಮ ಬೋನಾಫೈಡ್ಸ್ ಗೊತ್ತಾಗುತ್ತದೆ. ಇಲ್ಲದಿದ್ದರೆ ಸುಮ್ಮನೆ ಹೇಳುವುದಾಗುತ್ತದೆ. ಆಮೇಲೆ ಇವತ್ತು ಇಲ್ಲಿ ಪ್ರಮುಖವಾಗಿ ಅಮೆಂಡ್‌ಮೆಂಟ್ ತಂದದ್ದು ಈಗ ಯಾವ ಸರ್ಕಾರಿ ಭೂಮಿ ಇವೆ, ಸರ್ಕಾರಿ ರೆವಿನ್ಯೂ ಲ್ಯಾಂಡ್ಸ್ ಇವೆ, ಮತ್ತು ಯಾವುದು ಬೇರೆ ಬೇರೆ ಪ್ರಾಧಿಕಾರದ ಜಾಗಗಳು ಇರುತ್ತವೆ. ಅಲ್ಲಿ ಸ್ಲಂಗಳು ಹುಟ್ಟಿಬಿಡುತ್ತವೆ. ಆ ಲ್ಯಾಂಡ್‌ನ್ನು ನಿಮಗೆ ವರ್ಗಾವಣೆ ಮಾಡುವುದು. ಇಂಪ್ರೂವ್‌ಮೆಂಟ್ ಮಾಡುವುದು ಆ ಅಧಿಕಾರವನ್ನು ನೀವು ತೆಗೆದುಕೊಳ್ಳುವುದಕ್ಕೆ ಹೊರಟಿದ್ದೀರಿ. ಇಲ್ಲಿಯವರೆಗೆ ಎಲ್ಲಿ ಸ್ಲಂ ಬೆಳೆಯುತ್ತಿತ್ತೋ ಅದನ್ನು ಸ್ಲಂ ಎಂದು ಡಿಕ್ಲೇರ್ ಮಾಡುತ್ತಿದ್ದೀರಿ. ಆ ಡಿಕ್ಲೇರ್ ಮಾಡಿದ ಮೇಲೆ ಹಣವನ್ನು ಬಿಡುಗಡೆ ಮಾಡುವುದು, ಇಂಪ್ರೂಮೆಂಟ್ ಮಾಡುವುದು ಇವೆಲ್ಲಾ ನಡೆಯುತ್ತಿತ್ತು. ಆದರೆ ಈಗ ಆ ಲ್ಯಾಂಡನ್ನು ನೀವು ತೆಗೆದುಕೊಳ್ಳತಕ್ಕದ್ದು ನಂತರ ಅದನ್ನು ಪಟ್ಟಾ ಹಂಚುವುದು

ಇದು ಆಗುವಂಥದ್ದು. ಇದು ಒಂದು ರೀತಿಯಿಂದ ಒಳ್ಳೆಯದು. ನೀವು ಅದನ್ನು ತೆಗೆದುಕೊಂಡು ಇಂಪ್ರೂವ್‌ಮೆಂಟ್ ಮಾಡುವುದು. ಅದು ನಿಮ್ಮ ಮಾಲೀಕತ್ವಕ್ಕೆ ಬರುತ್ತದೆ. ಈಗ ಎಷ್ಟೋ ಕಡೆ ಡಿಸ್‌ಪ್ಯೂಟ್ ಇವೆ. ನಿಮಗೊಂದು ಉದಾಹರಣೆಯನ್ನು ಕೊಡಬೇಕಾದರೆ ಹುಬ್ಬಳ್ಳಿ ಮಹದೇವ ಜವಳಿ ಮಿಲ್ಲಿನದ್ದು ಏನು ಪ್ರಾಪರ್ಟಿ ಇದೆ. ಅದು ಸರ್ಕಾರದ್ದು. ಅಲ್ಲಿ ನೂರು ವರ್ಷದ ಗಿರಣಿಚಾಳ್ ಎಂಬ ಒಂದು ಸ್ಲಂ ಇದೆ. ಅವರು ಗುಡಿಸಲುಗಳನ್ನು ಹಾಕಿಕೊಂಡಿದ್ದಾರೆ. ಅಲ್ಲಿದ್ದಂಥವರೇ ಅಲ್ಲಿ ಗುಡಿಸಲುಗಳನ್ನು ಹಾಕಿಕೊಂಡಿದ್ದಾರೆ. ವಾಸವಾಗಿದ್ದಾರೆ. ನೂರು ವರ್ಷವಾಯಿತು. ನಿಮ್ಮ ಸ್ಲಂ ಬೋರ್ಡ್‌ನಿಂದ ಅದು ಸ್ಲಂ ಎಂದು ಹೇಳಿ 1996ರಲ್ಲಿ ಡಿಕ್ಲೇರ್ ಆಗಿದೆ. ಇವತ್ತು ಮಹದೇವ ಜವಳಿ ಗಿರಣಿಯವರು ನೋಟೀಸ್ ಕೊಟ್ಟಿದ್ದಾರೆ. ಅದು ಮುಚ್ಚಿಹೋಗಿ ಐದು ವರ್ಷವಾಯಿತು. ಅಲ್ಲಿ ಪರಿಹಾರಧನವನ್ನು ವಿತರಣೆ ಮಾಡುವ ಸಂದರ್ಭದಲ್ಲಿ ಆ ಗಿರಣಿಚಾಳ್‌ನಲ್ಲಿದ್ದಂಥ ಯಾರು ಕಾರ್ಮಿಕರಿದ್ದಾರೆ. 110 ಜನರು ಇದ್ದಾರೆ. ಅವರು ಆ ಗುಡಿಸಲುಗಳನ್ನು ಖಾಲಿ ಮಾಡಿದರೆ ಮಾತ್ರ ಪರಿಹಾರಧನವನ್ನು ಕೊಡುತ್ತೇವೆಂದು ಹೇಳಿದ್ದಾರೆ. ಆದರೆ ನಿಜವಾಗಿ ಹಕ್ಕು ಇರುವಂಥದ್ದು ಸ್ಲಂ ಬೋರ್ಡಿನದು. ಜವಳಿ ಗಿರಣಿಯವರು ಮತ್ತೆ ತಮ್ಮ ಹಕ್ಕನ್ನು ಕೇಳುತ್ತಿದ್ದಾರೆ. ಈ ಕನ್‌ಫ್ಯೂಷನ್ ಏನು ಇದೆಯಲ್ಲಾ, ಅದು ಹೋಗುತ್ತದೆ. ಆ ರೀತಿ ಗಿರಣಿ ಚಾಳದ್ದು ಸಮಸ್ಯೆ ಉಂಟಾಗಿದೆ. ಇಂಥ ಅಮೆಂಡ್‌ಮೆಂಟ್ ಆದರೆ ಅಂಥ ಸಮಸ್ಯೆಗಳು ನಿವಾರಣೆ ಆಗುವುದಕ್ಕೆ ಸಾಧ್ಯ ಆಗುತ್ತದೆ. ನಾನು ಹೇಳುವಂಥದ್ದು ಈ ರೀತಿಯಾದಂಥ ಸಂದರ್ಭದಲ್ಲಿ ಇದನ್ನು ನೀವು ಅಕ್ವೈರ್ ಮಾಡಿಕೊಂಡು ಈಗ ನೀವು ಹೇಳಿದಿರಿ, ಅಲ್ಲಿ ರಸ್ತೆಗಳನ್ನು ಮಾಡುವಂಥದ್ದು ಮತ್ತು ಹೊಸದಾಗಿ ಕಟ್ಟಿಸುವಂಥದ್ದು, ಅದರ ಬದಲಿಗೆ ಒಂದು ರೀತಿಯಿಂದ ಈ ಸ್ಲಂಗಳನ್ನು ಅಂದರೆ ಆ ಜಾಗಗಳನ್ನು ನಿಮ್ಮ ಮಾಲ್ಕಿಗೆ ತೆಗೆದುಕೊಳ್ಳುವಂಥದ್ದು. ಆದರೆ ಆ ಸ್ಲಂಗಳು ಆಗದ ರೀತಿಯಲ್ಲಿ ಅಥವಾ ನೀವೇ ಒಂದಿಷ್ಟು ಲ್ಯಾಂಡ್‌ನ್ನು ಪರ್ಚೇಸ್ ಮಾಡಿ, ಸರ್ಕಾರಿ ಲ್ಯಾಂಡ್ಸ್‌ನ್ನೇ ಪರ್ಚೇಸ್ ಮಾಡಿ. ಎಲ್ಲೆಲ್ಲಿ ಕೆಲವೊಂದು ಹಾರ್ಟ್ ಆಫ್ ದಿ ಸಿಟಿ ಇರುತ್ತವೆ, ಅಥವಾ ಎಕ್ಸ್‌ಟೆನ್‌ಷನ್‌ಗಳು ಇರುತ್ತವೆ. ಅಲ್ಲಿ ಸರ್ಕಾರಿ ಭೂಮಿ ಇದ್ದರೆ ಅಲ್ಲಿ ಗುಡಿಸಲುಗಳನ್ನು ಹಾಕಿಕೊಂಡು ಅನಧಿಕೃತವಾಗಿ ಸ್ಲಂಗಳನ್ನು ಬೆಳೆಸುವಂಥದ್ದು ನಡೆಯುತ್ತವೆ. ಇದರಲ್ಲಿ ಮಧ್ಯವರ್ತಿಗಳ ಕೈವಾಡ ಇದೆ. ಆ ಮಧ್ಯವರ್ತಿಗಳ ಕೈವಾಡ ಮತ್ತು ಸರ್ಕಾರ ಭೂಮಿ ತೆಗೆದುಕೊಳ್ಳುವಂಥದ್ದು, ಮಧ್ಯವರ್ತಿಗಳು ಹಣ ಮಾಡುವಂಥದ್ದು, ಅದೊಂದು ಸ್ಕ್ಯಾಮ್ ಲ್ಯಾಂಡ್ ಸ್ಕ್ಯಾಮ್ ಅದು. ಅಂಥವರಿಗೆ ನೀವು ಅವಕಾಶ ಕೊಡುವುದಕ್ಕೆ ಹೋಗಬೇಡಿ. ಅಂಥ ಇಂಪಾರ್ಟೆಂಟ್ ಇದ್ದರೆ ಮೊದಲೇ ನೀವೇ ಅಕ್ವೈರ್ ಮಾಡಿಕೊಳ್ಳಬೇಕಾದರೆ, ಅದಕ್ಕೂ ಬೇಕಾದರೂ ಪ್ರಾವಿಷನನ್ನು ಮಾಡಿಕೊಳ್ಳಿ. ಅಕ್ವೈರ್ ಮಾಡಿಕೊಂಡು ಅಲ್ಲಿ ಯಾರು ಬಡ ಜನರು ಇದ್ದಾರೆ, ಆ ಜನರಿಗೆ ಸೈಟುಗಳನ್ನು ಹಂಚತಕ್ಕ ಯೋಜನೆಯನ್ನಾದರೂ ಮಾಡಿ. ಮತ್ತು ಈ ಡೆವಲಪ್‌ಮೆಂಟ್ ಅಥಾರಿಟಿಯಿಂದ ಮತ್ತು ಬೇರೆ ಬೇರೆ ರೀತಿಯಿಂದ ಬಡವರಿಗೆ ದೀನದಲಿತರಿಗೆ ಸೈಟುಗಳನ್ನು ಹಂಚಿಕೆ ಮಾಡುವುದು. ಸೈಟುಗಳನ್ನು ಮಾಡಿ ಹಂಚಿದರೆ ಈ ಸ್ಲಂಗಳು ಬೆಳೆಯುವುದಕ್ಕೇ ಸಾಧ್ಯವೇ ಇಲ್ಲ. ಆ ರೀತಿ ಕೂಡ ವಿಚಾರ ಮಾಡುವಂಥಾದ್ದು ಆಗಬೇಕಾಗುತ್ತದೆ. ಇಲ್ಲದಿದ್ದರೆ ಯಾರೋ ಮಧ್ಯವರ್ತಿಗಳು ಬರುತ್ತಾರೆ. ಬಡವರಿಂದ ಹಣವನ್ನು ತೆಗೆದುಕೊಳ್ಳುತ್ತಾರೆ. ಸ್ಲಂಗಳನ್ನು ಮಾಡುತ್ತಾರೆ. ನಾಳೆ ನೀವು ಲ್ಯಾಂಡ್ ಅಕ್ವಿಜಿಷನನ್ನು ಮಾಡುವಂಥದ್ದು, ಇಂಪ್ರೂವ್‌ಮೆಂಟ್ ಮಾಡುವಂಥದ್ದು, ಅಲ್ಲಿ ಮಧ್ಯವರ್ತಿಗಳು ಆ ಬಡವರಕಡೆಯಿಂದ ಹತ್ತು, ಇಪ್ಪತ್ತು, ಮೂವತ್ತು, ಐವತ್ತು ಸಾವಿರ ರೂ.ಗಳವರೆಗೆ ಹಣವನ್ನು

ತೆಗೆದುಕೊಂಡು ಅವರು ಮಧ್ಯವರ್ತಿಗಳು ಕೋಟ್ಯಾಧೀಶರಾಗುತ್ತಾರೆ. ಅಂಥ ಮಧ್ಯವರ್ತಿಗಳನ್ನು ತಪ್ಪಿಸುವಂಥ ಕೆಲಸವಾಗಬೇಕು. ಅದಕ್ಕಾಗಿ ಆ ದಿಸೆಯಲ್ಲಿ ಸರ್ಕಾರದ ಚಿಂತನೆಯಾಗಬೇಕಾಗಿದೆ. ಅದಕ್ಕೆ ಆ ರೀತಿಯಲ್ಲಿ ಚಿಂತನೆ ಮಾಡಿ ನೀವು ಸೈಟುಗಳನ್ನು ಹಂಚುವಂಥದ್ದು, ಅದರ ಬಗ್ಗೆಯೂ ಸಹಾ ಚಿಂತನೆಯಾಗಬೇಕೆಂದು ಒಂದು ಕಳಕಳಿಯ ವಿನಂತಿ ಇದೆ. ಮುಂದೆ ನೀವು ಇನ್ನೊಂದು ಅಮೆಂಡ್‌ಮೆಂಟನ್ನು ತೆಗೆದುಕೊಂಡು ಬಂದಿದ್ದೀರಿ. ಏನೆಂದರೆ ಸೆಕ್ಷನ್ 34ರಲ್ಲಿ to change the composition of the Board ಸ್ಲಂ ಆ್ಯಕ್ಟಿನ ಸೆಕ್ಷನ್ 34 ಏನು ಹೇಳುತ್ತದೆ ಎಂದರೆ The Board shall consist of a Chairman and such member or official or non-official member not exceeding 15 as may be prescribed. ಇದನ್ನು ಇವತ್ತು ತಿದ್ದುಪಡಿ ಮಾಡಿ ನೀವು ಮತ್ತೆ ಒಟು ಅಮೆಂಡ್‌ಮೆಂಟ್ ಸಬ್‌ಸೆಕ್ಷನ್ (2) (ಕೆ) ಇದರಲ್ಲಿ ಏನು ಮಾಡುತ್ತಿದ್ದೀರಿ ಎಂದರೆ:

'Five non-official members nominated by the Government and out of whom on shall be a woman and one shall be a person belonging to SC or ST"

ಮೊದಲಿಂದಲೂ ಇದಕ್ಕೆ ನಾಮಿನೇಟೆಡ್ ಇತ್ತೋ ಇಲ್ಲವೋ ನನಗೆ ಗೊತ್ತಿಲ್ಲ. ಏಕೆಂದರೆ ಅದರಲ್ಲೇನು ಕ್ಲಿಯರ್ ಆಗಿ ಇಲ್ಲ. ಆಗ ಎಷ್ಟು ಇತ್ತು. ಈಗ 5 ಜನರನ್ನು ಮಾಡುತ್ತಿದ್ದೀರಿ. ಅಲ್ಲಿ ಮತ್ತೆ ತಮಗೆ ಬೇಕಾದಂಥವರನ್ನು ನೇಮಕ ಮಾಡುವಂಥದ್ದು ಇವೆಲ್ಲಾ ನಡೆಯುತ್ತಿವೆ. ಇದರಲ್ಲಿ ರಾಜಕೀಕರಣ ಮಾಡುವಂಥದ್ದು, ಕಾಂಗ್ರೆಸ್ಸೀಕರಣ ಮಾಡುವಂಥದ್ದು ನಡೆದಿದೆ ಹೇಗೆ ಎಲ್ಲದರಲ್ಲಿ ಏನು ಮಾಡುತ್ತಿದ್ದಾರೋ ಹಾಗೆ ಇಲ್ಲಿ ಕಾಂಗ್ರೆಸ್ಸೀಕರಣ ಮಾಡುವಂಥದ್ದು ಚಾಲೂ ಆಗುತ್ತಿದೆ. ಇದು ಆಗಬಾರದು. ಅದಕ್ಕೆ ಇದರ ಬಗ್ಗೆ ಮೊದಲು ಎಷ್ಟು ಸಂಖ್ಯೆ ಇತ್ತು ಎಂದು ಗೊತ್ತಾಗಬೇಕು. ಈಗ 5 ಜನರು ಎಂದು ಸ್ಪೆಷಿಫೈ ಮಾಡಿದ್ದೀರಿ. ನಾಳೆ ದಿವಸ ಬಡವರಿಗೆ ದೀನದಲಿತರಿಗೆ ಅನುಕೂಲವಾಗುವುದಾದರೆ ನಾನ್ ಪೊಲಿಟಿಕಲ್ ಇದ್ದಂಥ ವ್ಯಕ್ತಿಗಳನ್ನು ಬೋರ್ಡ್‌ನಲ್ಲಿ ಹಾಕುವಂಥದ್ದು ಆಗಬೇಕು. ಅಂದಾಗ ಮಾತ್ರ ಏನಾದರೂ ಬೆನಿಫಿಟ್, ಸ್ಲಂ ಬೋರ್ಡ್‌ನಿಂದ ಏನಾದರೂ ಬೆನಿಫಿಟ್ ಅವರಿಗೆ ಮುಟ್ಟುವುದಕ್ಕೆ ಸಾಧ್ಯ ಇದೆ ಎನ್ನುವಂಥದ್ದನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಅದಕ್ಕಾಗಿ ಈ ವಿಚಾರಗಳನ್ನು ತಾವು ಅಡಾಪ್ಟ್ ಮಾಡಿಕೊಂಡು ಇದರ ಬಗ್ಗೆ ಚಿಂತನೆಯನ್ನು ಮಾಡಿದಾಗ ಮತ್ತು ನಿಜವಾಗಿ ಮುಖ್ಯಮಂತ್ರಿಗಳು ಫಂಡ್ಸ್‌ನ್ನು ಹೆಚ್ಚಿಗೆ ಕೊಟ್ಟಿಲ್ಲ. ಸ್ಲಂ ಬೋರ್ಡ್ಸ್‌ಗೆ ಫಂಡ್ಸ್‌ನ್ನು ಹೆಚ್ಚಿಗೆ ಕೇಳಿ. ಅದಕ್ಕೆ ಹೆಚ್ಚಿನ ಹಣ ಬಿಡುಗಡೆ ಮಾಡುವ ಕೆಲಸವಾಗಲಿ. ನೀವು ಅಮೆಂಡ್‌ಮೆಂಟ್ ಮಾಡುವುದು ಇವೆಲ್ಲಾ ಆಯಿತು. ಒಂದು ಹಂತದಲ್ಲಿ ನೀವು ತೆಗೆದುಕೊಳ್ಳುತ್ತೀರಿ. ಯಾವ ಸ್ಲಂ ಎಂದು ಡಿಕ್ಲೇರ್ ಮಾಡಿರುತ್ತಾರೆ. ಅಥವಾ ರೆವಿನ್ಯೂ ಲ್ಯಾಂಡ್‌ನಲ್ಲಿ ಅನ್‌ಆಥರೈಸ್ಡ್ ಕನ್‌ಸ್ಟ್ರಕ್ಷನ್ ಆಗಿರುತ್ತವೆ. ಅವುಗಳನ್ನೆಲ್ಲಾ ನಿಮ್ಮ ವಶಕ್ಕೆ ತೆಗೆದುಕೊಳ್ಳುತ್ತೀರಿ. ನಿಮ್ಮ ಕಬ್ಜಾಜಕ್ಕೆ ಬರುತ್ತದೆ. ನೀವು ಮಾಲೀಕರಾಗುತ್ತೀರಿ. ನಾಳೆ ನೀವು ಟ್ರಸ್ಟಿಯಾಗುತ್ತೀರಿ. ಅದನ್ನು ಕಾಪಾಡಬೇಕಾಗುತ್ತದೆ. ಇಲ್ಲದಿದ್ದರೆ ನಾಳೆ ಎಲ್ಲಾ ಸ್ಲಂ ಜನರು ಬಂದು ನಿಮ್ಮ ಬೋರ್ಡ್ ಮುಂದೆ ಧರಣಿ ಕುಳಿತುಕೊಳ್ಳುತ್ತಾರೆ. ನೀವು ಮಾಲೀಕರಿದ್ದೀರಿ, ನಮಗೆ ಕೊಡಿ ಎಂದು ಹೇಳಿ. ನಮಗೆ ಸೈಟು ಹಂಚುವಂಥದ್ದನ್ನು ಮಾಡಿ, ನಮಗೆ ಅಲಾಟ್‌ಮೆಂಟ್ ಮಾಡಿ, ನಮಗೆ ಹಕ್ಕುಪತ್ರ ಕೊಡಿ. ಇವುಗಳನ್ನು ಇಂಪ್ರೂವ್‌ಮೆಂಟ್ ಮಾಡಿ ಎಂದು ಹೇಳಿ.

ನಿಯಮ ಕಡೆ ಫಂಡ್ಸ್ ಇಲ್ಲವೆಂದರೆ ಏನು ಮಾಡುತ್ತೀರಿ? ಈಗೇನೋ ವಾಲ್ಮೀಕಿ ಅಂಬೇಡ್ಕರ್ ಅವಾಸ್ ಯೋಜನೆ ಬಂದಿದೆ ಎಂದು ಹೇಳಿ ಅಲ್ಲಲ್ಲಿ ಸ್ಲಂಗಳಲ್ಲಿ ಮನೆ ಕಟ್ಟಿಸುವುದು ನಡೆದಿದೆ. ಆ ನಿರ್ಮಲಜ್ಯೋತಿ ಯೋಜನೆ ಎಲ್ಲಿಗೆ ಬಂತೋ ಗೊತ್ತಿಲ್ಲ. ಎಲ್ಲಿ ಅನುಷ್ಠಾನವಾಗುತ್ತಿದೆ ಗೊತ್ತಿಲ್ಲ ಎಷ್ಟು ಹಣ ಬಿಡುಗಡೆಯಾಗುತ್ತಿದೆಯೋ ಗೊತ್ತಿಲ್ಲ. ಮತ್ತೆ ರೆಗ್ಯುಲರ್ ಇಂಪ್ರೂವ್‌ಮೆಂಟ್ ಸಲುವಾಗಿ ಹಣ ಬಿಡುಗಡೆಯಾಗುತ್ತಿಲ್ಲ. ಇದರ ಬಗ್ಗೆ ಒಂದು ಸ್ಪಷ್ಟೀಕರಣ ಕೊಡುವಂಥದ್ದು ಆಗಬೇಕು. ಆ ದಿಸೆಯಲ್ಲಿ ಚಿಂತನೆ ಮಾಡಿದರೆ ಈ ತಿದ್ದುಪಡಿ ಮಾಡುವುದಕ್ಕೆ ಏನಾದರೂ ಒಂದು ಸೂಕ್ತತೆ ಆಗಲಿಕ್ಕೆ ಸಾಧ್ಯ ಇದೆ. ಇಲ್ಲದಿದ್ದರೆ ಅದಕ್ಕೆ ಅರ್ಥ ಇಲ್ಲ ಎನ್ನು ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ಎ. ರಾಮದಾಸ್ (ಕೃಷ್ಣರಾಜ):- ಮಾನ್ಯ ಅಧ್ಯಕ್ಷರೇ, ನಾವು ಸಂಪೂರ್ಣವಾಗಿ ಇದನ್ನು ವಿರೋಧ ಮಾಡುವಂಥ ವ್ಯವಸ್ಥೆಯಲ್ಲೇನು ಇಲ್ಲ. ಕಾರಣ ವಿಶೇಷವಾಗಿ ಸೆಕ್ಷನ್ 27(ಎ)ಗೆ ತಂದಿರುವಂಥ ಒಂದು ಅಮೆಂಡ್ ಮೆಂಟ್‌ನಲ್ಲಿ (1) ಮತ್ತು (2)ರಲ್ಲಿ ಸ್ವಾಗತಾರ್ಹವಾದಂಥ ಅಂಶಗಳು ಇದೆ. ಅದೆಂದರೆ ಕೊಳೆಚಿ ಪ್ರದೇಶದ ಮಧ್ಯದಲ್ಲಿ ಬರುತ್ತಿರುವಂಥ ರಸ್ತೆಗಳ ನಿರ್ಮಾಣ ಮಾಡಲಿಕ್ಕೆ, ಇನ್‌ಫ್ರಾಸ್ಟ್ರಕ್ಚರ್ ಕೊಡಲಿಕ್ಕೆ ಬೇಕಾಗಿರುವ ಮನೆಗಳನ್ನು ತೆಗೆಯುವಂಥದ್ದು ವ್ಯವಸ್ಥಿತವಾಗಿ ಅದನ್ನು ಅಲೈನ್‌ಮೆಂಟ್ ಮಾಡುವಂಥದ್ದು ಇಲ್ಲಿ ಬಹಳ ವಿಚಾರಗಳು ಇವೆ.

4.10 ಪಿ ಎಂ

ಇನ್ನು ಸೆಕ್ಷನ್ 27 (ಎ)ರಲ್ಲಿ ಮೂರನೇ ಅಂಶ ಏನು ಹೇಳಲಾಗಿದೆಯೆಂದರೆ ಈ ಒಂದು ಪ್ರದೇಶದ ಲೇಔಟ್‌ನಲ್ಲಿ ಬರುವಂಥ ನಿಮ್ಮ ಆಸ್ತಿ ಏನಿದೆ ಅದನ್ನು ಗುತ್ತಿಗೆಗೆ ಕೊಡಲು, ಹಂಚಿಕೆ ಮಾಡಲು ಮಾರಾಟ ಮಾಡಲು ಅಥವಾ ಅನ್ಯಥಾ ವರ್ಗಾವಣೆ ಮಾಡಲು ಮಂಡಳಿಗೆ ಅಧಿಕಾರವಿರತಕ್ಕದ್ದು ಎಂದಿದ್ದೀರಿ. ಇಲ್ಲಿ ವಿತರಣೆ ಮಾಡುವುದಕ್ಕೆ ನಮಗೆ ಯಾವುದೇ ರೀತಿಯಾದ ಅಭ್ಯಂತರವಿಲ್ಲ. ತಾವು ವಿತರಣೆ ಮಾಡುವುದಕ್ಕೋಸ್ಕರವಾಗಿಯೇ ಬಡವರಿಗೇ ಎಂದೇ ಇಟ್ಟುಕೊಂಡಿರುವಂಥದ್ದು. ಆದರೆ ಸಂಪೂರ್ಣವಾಗಿ ಈಗ ಇದು ನಿಮಗೇ ಇರುವಂಥ ಸಂದರ್ಭದಲ್ಲಿ ಒಂದು ಕಾಂಡೆಕ್ಟ್ ಆಫ್ ಬಿಸಿನೆಸ್ ರೂಲ್ಸ್ ಪ್ರಕಾರದಲ್ಲಿ ಯಾವುದೇ ಸರ್ಕಾರ 5 ಲಕ್ಷ ರೂಪಾಯಿಗಳಿಗಿಂತ ಹೆಚ್ಚಿನ ಒಂದು ಪರಭಾರೆ ಮಾಡಬೇಕಾದರೆ ಅದು ಕ್ಯಾಬಿನೆಟ್‌ಗೆ ಬರಬೇಕು ತದನಂತರ ಆ ಪ್ರಕಾರದಲ್ಲಿಯೇ ಹೋಗಬೇಕು. ಆದರೆ ಇಲ್ಲಿ ಸಂಪೂರ್ಣವಾಗಿ ಯಾವುದೇ ಫೈನಾನ್‌ಶಿಯಲ್ ಲಿಮಿಟ್ ನಿಮಗಿಲ್ಲ. 5 ಲಕ್ಷ, ರೂ 10 ಲಕ್ಷ ರೂ ಅಥವಾ ಒಂದು ಕೋಟಿ ರೂ ಎಂದು ಏನೂ ಲಿಮಿಟ್ ಇಲ್ಲವೇ ಇಲ್ಲ. ಪ್ರಾಪರ್ಟಿ ಎಷ್ಟರ ಮೊತ್ತದ್ದಾಗಿರಲಿ ಅದನ್ನು ನೀವು ಡಿಸ್‌ಪೋಸ್ ಮಾಡಬಹುದು ಎನ್ನುವಂಥ ಅಧಿಕಾರವನ್ನು ತೆಗೆದುಕೊಂಡರೆ ಹೇಗೆ? ನೀವು ಆ ವಿಚಾರದಲ್ಲಿ ತಾವು ಮಂತ್ರಿಗಳಾಗಿದ್ದೀರಿ, ಯಾರೋ ಸ್ಲಮ್ ಬೋರ್ಡಿನ ಛೇರ್ಮನ್ ಆಗಿರಬಹುದು, ಈಗಿರಬಹುದು. ಆದರೆ ಮುಂದಿನ ರೀಪರ್‌ಕೇಶನ್ ನೋಡೋಣ. ಲಾಂಗ್ ವಿಷನ್ ಇಟ್ಟುಕೊಂಡಾಗ ಯಾರೋ ಬಂದು ಇಡೀ ಸ್ಲಮ್ ಬೋರ್ಡ್‌ನ ಆಸ್ತಿಯನ್ನು ಮಾರಿಬಿಡುತ್ತೇನೆ ಎಂದು ಹೇಳಿ ಈ ಪ್ರಾವಿಶನ್ನನ್ನು ಉಪಯೋಗಿಸಿಕೊಳ್ಳುವಂಥದ್ದು ಆಗಬಾರದು. ದಯವಿಟ್ಟು ಈ ಮಾರಾಟ ಮಾಡುವಂಥದ್ದು ಎಂದು ಏನಿದೆ ಅದನ್ನು ದಯಮಾಡಿ ತೆಗೆಯಬೇಕು. ಇಲ್ಲಿ ವಿತರಣೆ ಮಾಡುವ ವಿಚಾರವೇನಿದೆ ಅದನ್ನು ಉಳಿಸಿಕೊಳ್ಳಬಹುದು. ಏಕೆಂದರೆ in the long run ಈ ಮಾರಾಟ ಮಾಡುವಂಥದ್ದು ಬಹಳ ಸಮಸ್ಯೆಯಾಗುತ್ತದೆ. ಆ ದೃಷ್ಟಿಯಿಂದ

ಇದನ್ನು ತೆಗೆಯುವಂಥ ಕೆಲಸವಾಗಬೇಕು ಎನ್ನುವಂಥದ್ದು ಬಹಳ ಸಮಸ್ಯೆಯಾಗುತ್ತದೆ. ಆ ದೃಷ್ಟಿಯಿಂದ ಇದನ್ನು ತೆಗೆಯುವಂಥ ಕೆಲಸವಾಗಬೇಕು ಎನ್ನುವಂಥದ್ದು ನನ್ನ ವಿಚಾರ. ಇನ್ನು ಎರಡನೆಯದಾಗಿ, ಸಬ್ ಸೆಕ್ಷನ್ 34(2)ರ ಪ್ರಕರಣದಲ್ಲಿ ಸಬ್‌ಸೆಕ್ಷನ್ 'ಎ' ನಲ್ಲಿ ಏನು ಹೇಳುತ್ತಾರೆಂದರೆ, ವಸತಿ ಮತ್ತು ನಗರಾಭಿವೃದ್ಧಿ ನಿಗಮದ ಸ್ಥಳೀಯ ಮುಖ್ಯಸ್ಥ ಅದರಲ್ಲಿ ಒಬ್ಬ ಮೆಂಬರ್ ಇರುತ್ತಾನೆ. ಎಕ್ಸ್-ಅಫಿಶಿಯೋ ಮೆಂಬರ್ in the capacity of any Chairman of the Authority, he shall be a Member. ಆದರೆ ಅದೆಲ್ಲಾ ಪಕ್ಷದೊಳಗಡೆ ವಂಶಪಾರಂಪರ್ಯವಾಗಿ ಬರುವಂಥದ್ದು, ಇವೆಲ್ಲವನ್ನೂ ನಾನು ಹೇಳಲಿಕ್ಕೆ ಹೋಗುವುದಿಲ್ಲ. ಆದರೆ ಇಲ್ಲಿ ನೀವು ಅವನಿಗೆ ಅಧಿಕಾರವನ್ನು ಕೊಟ್ಟುಬಿಡುತ್ತೀರಿ. ಅವನ್ನೇ ಇನ್ನೊಬ್ಬನ್ನು ನಾಮಿನೇಟ್ ಮಾಡಬಹುದು How can it beg ತಾನೇ ಸರ್ಕಾರದಿಂದ ನಾಮಿನೇಟ್ ಆಗಿ ಎಕ್ಸ್-ಅಫಿಶಿಯೋ ಮೆಂಬರ್ ಆಗಿ ಅಲ್ಲಿಗೆ ನಾಮಿನೇಟ್ ಆಗಿ ಬಂದವನೇ ಇನ್ನೊಬ್ಬನನ್ನು ನೇಮಕ ಮಾಡಬಹುದು ಎನ್ನುವಂಥದ್ದು ಆದರೆ ಹೇಗೆ? ಒಬ್ಬ ಅಪ್ಪ ಯಾವುದೋ ಒಂದು ಬೋರ್ಡ್‌ಗೆ ಛೇರ್ಮನ್ ಆಗಿರುತ್ತಾನೆ. ಅವನು ಅವನ ಮಗನನ್ನೇ ನಾಮಿನೇಟ್ ಮಾಡಬಹುದು ಎಂದರೆ ಅರ್ಥ ಏನು? I cannot understand, ಇಲ್ಲಿ ಈ ಒಂದು ಸೆಕ್ಷನ್ ಏನಿದೆ ಇದು ಕಾನೂನು ಬಾಹಿರವಾದಂಥದ್ದು. ಇಲ್ಲಿ in the capacity of the Chairman of the Authority he will come as a Member. ಅವನು ಗೈಡ್ ಮಾಡಲಿಕ್ಕೋಸ್ಕರವಾಗಿ ಅಲ್ಲಿಗೆ ಬರುತ್ತಾನೆ. ಅವನು ಹಾಗೆ ಬರಬೇಕೇ ಹೊರತು ಅವನು ಇನ್ನೊಬ್ಬನನ್ನು ನಾಮಿನೇಟ್ ಮಾಡುವುದಕ್ಕೆ ಕಾನೂನಿನಲ್ಲಿ ಪ್ರಾವಿಶನ್ ಇಲ್ಲ. ಅದನ್ನು ತೆಗೆಯುವಂಥ ಕೆಲಸ ಆಗಬೇಕು. ತಾವು ಆಗಲೇ ಹೇಳಿದ ಹಾಗೆ ನಮ್ಮ ನಾಯಕರು ಹೇಳಿದರು. ನಾನ್-ಅಫಿಶಿಯಲ್ ಮೆಂಬರ್‌ಗಳನ್ನು ಒಂದು ಕಡೆ ನೀವು ನೇಮಕ ಮಾಡುತ್ತಿದ್ದೀರಿ, ಒಂದು ಕಡೆ ಪ್ರಾಪರ್ಟಿಯನ್ನು ಮಾರುವುದಕ್ಕೆ ಪ್ರಾವಿಶನ್ ಮಾಡುತ್ತಿದ್ದೀರಿ. ಅಂದರೆ ಇಲ್ಲಿರುವಂಥ ನಾನ್-ಅಫಿಶಿಯಲ್ ಮೆಂಬರ್ಸ್ ಮತ್ತು ಇರುವಂಥ ವ್ಯವಸ್ಥೆಗಳಲ್ಲಿ ಪ್ರಾಪರ್ಟಿಯನ್ನು ಮಾರುವಂಥ ದೃಷ್ಟಿಯಿಂದ ಈ ಒಂದು ಅಂಶಗಳು ಒಳಗೊಂಡಿರುತ್ತವೆ. ದಯವಿಟ್ಟು ಅದನ್ನು ತೆಗೆಯಿರಿ. ಇನ್ನು ಮೂರನೇ ಅಂಶ, ಹೇಳುವುದಾದರೆ, 1974ರ ಕರ್ನಾಟಕ ಅಧಿನಿಯಮ 32ಕ್ಕೆ ತಿದ್ದುಪಡಿ. ನನಗೆ ಅರ್ಥವಾಗುತ್ತಾ ಇಲ್ಲ, ಲಾ ಮಿನಿಸ್ಟರ್ ಇಲ್ಲಿ ಇದ್ದರೆ ಕೇಳೋಣ ಅಂತಿದ್ದೆ. ಆದರೆ ಲಾ ಮಿನಿಸ್ಟರ್ ಈಗ ಇಲ್ಲಿ ಇಲ್ಲ. ತಾವು ತಿದ್ದುಪಡಿ ತರಲಿಕ್ಕೆ ಹೊರಟಿರುವುದು ಯಾವುದು? ಯಾವುದಕ್ಕೆ ತಿದ್ದುಪಡಿ ತರುವುದಕ್ಕೆ ತಾವು ಹೊರಟಿದ್ದೀರಿ? 1954ರ ಕರ್ನಾಟಕ ಅಧಿನಿಯಮ 32ಕ್ಕೆ ತಿದ್ದುಪಡಿಯನ್ನು ಸಾರ್ವಜನಿಕ ಆವರಣಗಳ ಅನಧಿಕೃತ ಅನುಭವದ ಮತ್ತು ಹೊರ ಹಾಕುವ ಎನ್ನುವಂಥ ಒಂದು ವಿಧೇಯಕಕ್ಕೋಸ್ಕರವಾಗಿ ನೀವು ಇವೊತ್ತು ಅಮೆಂಡ್ ಮೆಂಟನ್ನು ತರುವುದಕ್ಕೆ ಹೊರಟಿದ್ದೀರಿ. ಅಂದರೆ ಎವಿಕ್ಷನ್‌ಗೆ, ಪಬ್ಲಿಕ್ ಪ್ರೆಮಿಸಸ್ ಎವಿಕ್ಷನ್ ಆ್ಯಕ್ಟ್, ಅದಕ್ಕೆ ಸೆಪರೇಟ್ ಆಗಿ ತಿದ್ದುಪಡಿ ತರಬೇಕೇ ಹೊರತು ಕೊಳಚೆ ಮಂಡಳಿಯೊಳಗೆ ಹೇಗೆ ತರುತ್ತೀರಿ? ಅಲ್ಲ, ನನಗೆ ಆಶ್ಚರ್ಯವಾಗುವಂಥದ್ದು, ಕೊಳಚೆ ಮಂಡಳಿಗೆ ಆ್ಯಕ್ಟನ್ನು ತರುತ್ತಾ, ನೀವು ತರಲಿಕ್ಕೆ ಹೊರಟಿರುವುದು ಯಾವುದು? ಇಲ್ಲಿ ಪಬ್ಲಿಕ್ ಪ್ರೆಮಿಸಸ್ ಎವಿಕ್ಷನ್ ಆ್ಯಕ್ಟ್‌ಗೆ ತಿದ್ದುಪಡಿಯನ್ನು ನಾವು ತರುತ್ತಿದ್ದೇವೆ. ಇಲ್ಲಿ ಸ್ಲಮ್ ಬೋರ್ಡ್‌ನ್ನೂ ಇದನ್ನು ಹೇಗೆ ತರುವುದಕ್ಕೆ ಆಗುತ್ತದೆ? ಪ್ರತ್ಯೇಕವಾದಂಥದ್ದರಲ್ಲಿ ಈ ಒಂದು ಎವಿಕ್ಷನ್ ಆರ್ಡರ್‌ಗೆ ಅಮೆಂಡ್‌ಮೆಂಟನ್ನು ತಂದು ಅಲ್ಲಿ ಈ ಸ್ಲಮ್ ಬೋರ್ಡ್‌ಮೊನ್ನು ಸೇರಿಸಬೇಕೇ ಹೊರತು ಸ್ಲಮ್ ಬೋರ್ಡ್‌ನೊಳಗಡೆ

ಈ ಒಂದು ಪಬ್ಲಿಕ್ ಪ್ರೆಮಿಸಸ್ ಎವಿಕ್ಷನ್ ಆ್ಯಕ್ಟ್‌ನ್ನು ತಿದ್ದುಪಡಿ ಮಾಡುವುದಕ್ಕೆ ಬರುವುದಿಲ್ಲ. ಆ ಒಂದು ವಿಚಾರಕ್ಕೋಸ್ಕರವಾಗಿಯೇ ನೀವು ತಿದ್ದುಪಡಿ ತನ್ನಿ, ಅದನ್ನು ನಾವು ಸ್ವಾಗತ ಮಾಡುತ್ತೇವೆ. ಅದರ ಅಂಶಗಳು ಸರಿ ಇದೆ. ಕಾನೂನಿನ ಪ್ರಕಾರವಾಗಿ ನಾಳೆ ನೀವು ಎವಿಕ್ಷನ್‌ಗೆ ಹೋದ ತಕ್ಷಣದಲ್ಲಿಯೇ ಟೋಟಲ್ ಅಮೆಂಡ್‌ಮೆಂಟ್ ಈ ಆ್ಯಕ್ಟ್‌ಗೆ ಆಗಿಲ್ಲ, ಕೇವಲ ಕೊಳಚೆ ಮಂಡಳಿಗೆ ಹೋಗಿದೆ ಎಂದು ಹೇಳಿ ನಾಳೆ ಕೋರ್ಟ್‌ಗೆ ಹೋಗಿ ಸ್ಟೇ ತೆಗೆದುಕೊಂಡು ಬರುತ್ತಾನೆ ಇನ್ನೊಬ್ಬ. ಕಾನೂನಿನಲ್ಲಿ ಸಿಂಧುತ್ವ ಇಲ್ಲ. ಹಾಗಾಗಿ ಇದನ್ನು ನೀವು ತರಬೇಕಾಗಿರುವಂಥದ್ದು ಪಬ್ಲಿಕ್ ಪ್ರೆಮಿಸಸ್ ಆ್ಯಕ್ಟ್‌ಗೆ ಅಮೆಂಡ್‌ಮೆಂಟ್‌ನ್ನು ತಂದು ಅದರಲ್ಲಿ ಕೊಳಚೆ ನಿರ್ಮೂಲನಾ ಮಂಡಳಿಯಲ್ಲಿರುವಂಥ ಪ್ರಾಪರ್ಟಿಯನ್ನೂ ಕೂಡ ಎವಿಕ್ಷನ್ ಇದರಡಿಯಲ್ಲಿ ಬರಬೇಕು ಎಂದು ಹೇಳಬೇಕೇ ಹೊರತು ಸ್ಲಮ್ ಬೋರ್ಡ್‌ಗೆ ತಂದಿರುವಂಥ ಈ ಅಮೆಂಡ್‌ಮೆಂಟ್‌ನ ಆ್ಯಕ್ಟ್‌ನಡಿಯಲ್ಲಿ ಇದನ್ನು ಇನ್ ಕಾರ್ಪೋರೇಟ್ ಮಾಡುವುದಕ್ಕೆ ಲೀಗಲ್ ಪ್ರಾವಿಶನ್ ಇಲ್ಲ. ಈ ಮೂರು ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಅಮೆಂಡ್‌ಮೆಂಟ್‌ನ್ನು ಮಾಡಿದರೆ ಇದನ್ನು ನಾವು ಸ್ವಾಗತ ಮಾಡುತ್ತೇವೆ.

ಶ್ರೀ ಬಿ.ಎನ್. ಬಚ್ಚೇಗೌಡ(ಹೊಸಕೋಟೆ):- ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಮೂರ್‍ನಾಲ್ಕು ಸಾವಿರ ಸ್ಲಮ್ಸ್ ಇವೆಯೇನೋ? ಒಟ್ಟು ಎಷ್ಟು ಸ್ಲಮ್ಸ್ ಇದೆ ಎನ್ನುವ ಬಗ್ಗೆ ಮಾನ್ಯ ಮಂತ್ರಿಗಳು ತಿಳಿಸಬೇಕು. ಇದರ ಜೊತೆಗೆ ಡಿಕ್ಲೇರ್ಡ್ ಸ್ಲಮ್ಸ್ ಎಷ್ಟು ಮತ್ತು ಅನ್-ಡಿಕ್ಲೇರ್ಡ್ ಸ್ಲಮ್ಸ್ ಎಷ್ಟಿದೆ ಎನ್ನುವ ಮಾಹಿತಿಯು ನಮಗೆ ಬೇಕು. ಇದರ ಜೊತೆಯಲ್ಲಿ ಅಲ್ಲಿ ಎಷ್ಟು ಜನರು ವಾಸ ಮಾಡುತ್ತಾರೆ ಎಂದು ತಿಳಿಸಬೇಕು.ಕರ್ನಾಟಕ ರಾಜ್ಯದಲ್ಲಿ ಇವೊತ್ತು ಬೆಂಗಳೂರಿನಲ್ಲಿ ಅತಿ ಹೆಚ್ಚು ಸ್ಲಮ್ಸ್ ಇವೆ. ಇದರ ನಂತರ ಇಡೀ ನಗರಗಳಲ್ಲಿ, ಪಟ್ಟಣಗಳಲ್ಲಿ ಇರತಕ್ಕಂಥ ಸ್ಲಮ್ಸ್, ಇದರಲ್ಲಿ ಸಮಗ್ರವಾಗಿ ಇವೊತ್ತು ಏನು ಈ ತಿದ್ದುಪಡಿ ತಂದಿದ್ದಾರೆ ಕರ್ನಾಟಕ ಸ್ಲಮ್ಸ್ ಏರಿಯಾಸ್ ಇಂಪ್ರೂವ್‌ಮೆಂಟ್ ಅಂಡ್ ಕ್ಲಿಯರೆನ್ಸ್ ಎಂದು ಹೇಳಿ, ಇವೊತ್ತು ನಾನು ಮಾನ್ಯ ಸಚಿವರನ್ನು ಕೇಳುವಂಥದ್ದು ಇವೊತ್ತು ಸ್ಲಮ್ಸ್ ಡ್ವೆಲ್ಲರ್ಸ್ ವಾಸ ಮಾಡುವಂಥವರು, ಇದುವರೆಗೆ ಅಲ್ಲಿ ಅವರು ಅಕ್ರಮವಾಗಿ ವಾಸ ಮಾಡುತ್ತಿದ್ದಾರೆಯೇ? ಇವೊತ್ತೇನು ಆ ಜಮೀನಿನ ಮೇಲೆ ಮನೆಗಳನ್ನು ಕಟ್ಟಿಕೊಂಡು ಇದ್ದಾರೆ ಅಥವಾ ನಾನಾ ರೀತಿಯ ಯೋಜನೆಯ ರೂಪದಲ್ಲಿ ಸ್ಲಮ್‌ನಿಂದ ಮನೆಗಳನ್ನು ಅವರಿಗೆ ಕಟ್ಟಿಸಿಕೊಟ್ಟಿದ್ದೀರಿ, ಅವರಿಗೆ ಹಕ್ಕು ಪತ್ರಗಳನ್ನು ಕೊಡುವಂಥದ್ದಾಗಲಿ, ಅವರಿಗೆ ವಾಸ ಮಾಡಲು ಗ್ಯಾರಂಟಿ ಕೊಡುವಂಥದ್ದಾಗಲಿ, ಈ ಮಾಹಿತಿಯನ್ನು ತಾವು ಸದನಕ್ಕೆ ತಿಳಿಸಬೇಕಾಗುತ್ತದೆ. ಈಗ ಎಕ್ಸಿಸ್ಟಿಂಗ್ ಪೊಸಿಶನ್‌ನಲ್ಲಿ ಅವರು ಇರುವಂಥದ್ದು ಯಾವುದು? ಈಗ ತಾವು ಕೇಳುತ್ತಿದ್ದೀರಿ. ಸರ್ಕಾರಿ ಭೂಮಿಯನ್ನು ಅಥವಾ ಯಾವುದಾದರೂ ಬೋರ್ಡ್, ಲೋಕಲ್ ಅಥಾರಿಟಿಯಲ್ಲಿರತಕ್ಕಂತ ಭೂಮಿಯನ್ನು ಟ್ರಾನ್ಸ್‌ಫರ್ ಮಾಡುವಂಥದ್ದು. ಆ ಭೂಮಿಯನ್ನು ಟ್ರಾನ್ಸ್‌ಫರ್ ಮಾಡಿ ಇವರು ಅಲ್ಲಿ ಬೇಕಾದಷ್ಟು ಅಭಿವೃದ್ಧಿ ಮಾಡುವಂಥದ್ದು ಅವರಿಗೆ ರಸ್ತೆಗಳು, ನಿವೇಶನಗಳು ಮತ್ತು ಬೇರೆ ಬೇರೆ ರೀತಿಯಲ್ಲಿ ಸವಲತ್ತುಗಳನ್ನು ಕಲ್ಪಿಸಿಕೊಡುವಂಥ ಒಂದು ವ್ಯವಸ್ಥೆ ಮತ್ತು ಇನ್ನೂ ಒಂದು ತಾವು ಕ್ಲಾಸ್ ಹಾಕಿರುವಂಥದ್ದು ಇವೊತ್ತು ಅವರಿಗೆ ಅಲಾಟ್ ಮಾಡುವುದರ ಜೊತೆಗೆ ಮಾರಾಟಾನೂ ಮಾಡುವಂಥದ್ದು. to allot to lease also ಯಾರ ಪರವಾಗಿ ಲೀಸ್ ಕೊಡುವಂಥದ್ದು? ಇವೊತ್ತು ಸ್ಲಮ್‌ನಲ್ಲಿ ವಾಸ ಯಾರಿದ್ದಾರೆ ಅವರಿಗೆ ಕೊಡುವಂಥ ಒಂದು ವ್ಯವಸ್ಥೆ ಇವೊತ್ತೇನು ಸ್ಲಮ್ ಅಂದರೇನೇ ಒಂದು ಕೆಟ್ಟ ಚಿತ್ರ ಬರುವಂಥದ್ದು, ಸರಿಯಾದ

ರಸ್ತೆಗಳಿಲ್ಲ, ಉತ್ತಮವಾದ ಪರಿಸರವಿಲ್ಲ, ಅವರಿಗೆ ಉತ್ತಮವಾದ ನೀರು ಕೊಡುವಂಥ ಒಂದು ವ್ಯವಸ್ಥೆ ಇಲ್ಲ. ದೀಪಗಳನ್ನು ಹಾಕಿಸಿಕೊಡುವಂಥದ್ದು ಇಲ್ಲ, ಅದು ಚೊಕ್ಕಟವಾಗಿರುವಂಥ ಹೈಜೀನಿಕ್ಕಾಗಿ ಆರೋಗ್ಯಕರವಾದ ದೃಷ್ಟಿಯಿಂದ ಇರುವಂಥದ್ದಲ್ಲ. ಆ ಚಿತ್ರವನ್ನು ತೆಗೆಯಬೇಕು ಎನ್ನುವ ದೃಷ್ಟಿಯಿಂದ ಈ ಮಸೂದೆಯನ್ನು ಇವೊತ್ತು ತಾವು ತಂದಿರುವುದು ಎಂದು ನಾನಾದರೂ ಅಂದುಕೊಂಡಿದ್ದೇನೆ. ಅದಕ್ಕೆ ಅದನ್ನು ದುರುಪಯೋಗವಾಗದಿರುವ ಬಗ್ಗೆ ತಾವು ಹೇಳಿದ್ದೀರಿ. To empower the Board to lease ಯಾರಿಗೆ ಲೀಸ್ ಕೊಡುವಂಥದ್ದು? ಯಾರಿದ್ದಾರೆ ಅಲ್ಲಿ ಈಗ ಅವರಿಗೆ ಕೊಡುವಂಥ ವ್ಯವಸ್ಥೆಯಾಗಬೇಕು. ಯಾರಿಗೆ ತಾವು ಲೀಸ್ ಕೊಡುತ್ತೀರಿ? or to allot, sell or otherwise transfer the sites formed in the layout to the... ಯಾರಿಗೆ ಕೊಡ್ತೀರಾ ಅದು? ಅದೇ slum dwellers ಗೆ ತಾವು ಇದನ್ನು ಕೊಡುತ್ತಾ ಇದ್ದೀರಾ ಎನ್ನುವ ಪ್ರಶ್ನೆ ಇವೊತ್ತು ಬಹಳ ಮುಖ್ಯವಾಗಿ ಆಗಬೇಕಾಗಿರುವಂಥದ್ದು. ಇದರ ಬಗ್ಗೆ ಸಾಕಷ್ಟು ಮಾಹಿತಿಗಳನ್ನು ಕೊಡಬೇಕು. ಉದ್ದೇಶ ಸರಿ ಇವೊತ್ತು ಮತ್ತೆ ಸ್ಲಮ್‌ಗಳನ್ನು ಹೆಚ್ಚು ಮಾಡುವುದಿಲ್ಲವೇ? ಈಗ ಸ್ಲಮ್ಸ್ ಎಷ್ಟಿವೆ ಎಂಬ ಬಗ್ಗೆ ತಾವು ತಿಳಿಸುವವರಿದ್ದೀರಿ ಅದಕ್ಕಿಂತ ಇನ್ನು ಹೆಚ್ಚು ಸ್ಲಮ್ಸ್ ಆಗದೇ, ಇವೊತ್ತು ಬೇರೆ ಪ್ರದೇಶಗಳನ್ನು ಸ್ವಾಧೀನಕ್ಕೆ ತೆಗೆದುಕೊಂಡು ಅವರಿಗೆ ನಿವೇಶನಗಳನ್ನು ಮಾಡಿಕೊಂಡುವಂಥ ಪ್ರಾನ್ಸ್ ವೇನಲ್ಲಿ ಹೋಗುವಂಥದ್ದು ಆಗಬೇಕು. ಇನ್ನು ಸ್ಲಮ್‌ಗಳನ್ನು ಬೆಳೆಸಿಕೊಂಡು ಹೋಗುವುದರಲ್ಲಿ ಅರ್ಥವಿಲ್ಲ. ಅಥವಾ ಸ್ಲಮ್ಸ್ ಆಗಿದೆ ಎಂದು ಹೇಳಿ ಅವುಗಳನ್ನು ತೆಗೆದು ಬೇರೆ ಕಡೆ ಹಾಕುವಂಥದ್ದು, ಮತ್ತೆ ಹಾಕುವಂಥವರಿಗೇನಾದರೂ ಅವರಿಗೆ ಬೇರೆ ಸೈಟ್‌ಗಳನ್ನು ಅಲಾಟ್ ಮಾಡುವಂಥ ವ್ಯವಸ್ಥೆ ಇದೆಯೇ ಇವೊತ್ತು? ಸ್ಲಮ್‌ನ್ನು ಟೋಟಲಿ ತೆಗೆದು ಹಾಕುತ್ತೀರಿ. ಆಸ್ಲಮ್ ಇರಕೂಡದು, ಅದು ಬೇರೆ ಪರ್ಪ್‌ಸ್‌ಗೆ ಬೇಕು ಎಂದು ತಾವು ತೆಗೆದುಕೊಂಡಾಗ ಆ ಸ್ಲಮ್‌ನಲ್ಲಿ ವಾಸ ಮಾಡುವಂಥವರಿಗೆ ಅವರಿಗೆ ಪುನರ್ ವಸತಿ ಕಲ್ಪಿಸಿಕೊಡುವಂಥ ತೀರ್ಮಾನವೂ ಇದರಲ್ಲಿ ಬಂದಿದೆಯೆ? ಅದರ ಬಗ್ಗೆ ಮಾನ್ಯ ಸಚಿವರು ತಿಳಿಸಬೇಕಾಗುತ್ತದೆ. ಈ ಉದ್ದೇಶದಿಂದ ಇವೊತ್ತು ತಂದಿರುವ ತಿದ್ದುಪಡಿ ದುರುಪಯೋಗವಾಗದಂತೆ ಸದುಪಯೋಗವಾಗುವ ದಿಸೆಯಲ್ಲಿ ಕಾರ್ಯವಾಗಬೇಕು ಎಂದು ಹೇಳುತ್ತೇನೆ. ಇವೊತ್ತು ಸಾಕಷ್ಟು ಸ್ಲಮ್ಸ್‌ನಲ್ಲಿ ಬಹು ಮಹಡಿ ಕಟ್ಟಡಗಳನ್ನು ಅಂದರೆ ಅಲ್ಲಿ ಹತ್ತಾರು ಜನರು ವಾಸ ಮಾಡುವಂಥದ್ದನ್ನು ಕಟ್ಟಿಸಿಕೊಟ್ಟಿದ್ದಾರೆ. ಅವರಿಗೇನಾದರೂ ಹಕ್ಕುಪತ್ರಗಳು ಅಲಾಟ್‌ಮೆಂಟ್, ಇವೆಲ್ಲಾ ಕೊಟ್ಟಿರುವಂಥದ್ದು ಮತ್ತು ಅವರು ಹತ್ತಾರು ವರ್ಷಗಳ ತನಕ ಅವರು ಪರಭಾರೆ ಮಾಡಬಾರದು. ಅನೇಕ ಸ್ಲಮ್‌ಗಳಲ್ಲಿ ಇಲ್ಲಿಯೇ ಇರುತ್ತಾನೆ ಅವನು ಇವೊತ್ತೇನು ತಾವು 25 ಲಕ್ಷ ಜನ ವಾಸ ಮಾಡುತ್ತಾರೋ, 50 ಲಕ್ಷ ಜನ ವಾಸ ಮಾಡುತ್ತಾರೋ ನನಗೆ ಗೊತ್ತಿಲ್ಲ. ಅನೇಕ ಕಡೆ ಹಕ್ಕುಪತ್ರಗಳನ್ನು ತೆಗೆದುಕೊಂಡು ಇವೊತ್ತು ಮಾರಾಟ ಮಾಡಿಕೊಳ್ಳುತ್ತಾರೆ ಅವರು ಈ ಸ್ಲಮ್‌ನಲ್ಲೂ ವಾಸ ಮಾಡುತ್ತಾರೆ. ಬೇರೆ ಸ್ಲಮ್‌ನಲ್ಲೂ ವಾಸ ಮಾಡುತ್ತಾರೆ. ಬೆಂಗಳೂರಿನಲ್ಲಿ 200, 300 ಸ್ಲಮ್‌ಗಳಿವೆ ಎಂದು ಅಂದುಕೊಂಡಿದ್ದೇವೆ ಅಥವಾ 400 ಸ್ಲಮ್ ಇದೆಯೋ? ಎಲ್ಲಿಂದರಲ್ಲಿ ಹಕ್ಕುಪತ್ರ ತೆಗೆದುಕೊಂಡು, ಇದನ್ನು ಮಾನಿಟರ್ ಮಾಡುವವರು ಯಾರು? ಹಾಗೇನೇ ಹಸಿರು ಕಾರ್ಡು ಹಾಗೇನೇ ಬೆಂಗಳೂರಿನಲ್ಲಿ ತಾವು ಕೊಡುವಂಥದ್ದು. ಇವೊತ್ತು ಇಲ್ಲೂ ತೆಗೆದುಕೊಳ್ಳುತ್ತಾರೆ. ಬೇರೆ ಕಡೆಯೂ ಕಾರ್ಡು ತೆಗೆದುಕೊಳ್ಳುತ್ತಾರೆ. ಯಾರನ್ನು ಯಾರು ಐಡೆಂಟಿಫೈ ಮಾಡಿ ಅವರನ್ನು, ಹೌದು ಅವರು ಇಲ್ಲೀ ವಾಸ ಮಾಡುತ್ತಿದ್ದಾರೆ ಅನ್ನುವುದನ್ನು, ರಿಜಿಸ್ಟರ್ ಆಗುವಂಥ ವ್ಯವಸ್ಥೆ

ಇವೊತ್ತು ಇಲ್ಲಿ ಇಲ್ಲ. ಅನೇಕ ಭಾಗಗಳಲ್ಲಿ ಇದು ನಡೆಯುತ್ತಿದೆ. ಅವರಿಗೆ ನಿವೇಶವೋ ಕೊಡುತ್ತೀರೋ, ಮನೆ ಕೊಡುತ್ತೀರೋ ನಾವು ಗ್ರಾಮಾಂತರ ಪ್ರದೇಶಗಳಲ್ಲಿ ನೋಡುತ್ತಿದ್ದೇವೆ. ಹತ್ತಾರು ನಿವೇಶನಗಳನ್ನು ತೆಗೆದುಕೊಂಡಿರತಕ್ಕಂತಹವರು 2-3 ನಿವೇಶನಗಳನ್ನು ತೆಗೆದುಕೊಂಡಿರತಕ್ಕಂಥವರು ಮನೆಗಳನ್ನು ಕಟ್ಟಿಸಿಕೊಂಡಿರತಕ್ಕಂಥವರು ಬಾಡಿಗೆ ಕೊಡುವುದು ಇದೆ. ಇವರು ಬಾಡಿಗೆಗಳಿಗೆ ಕೊಡಬಾರದು. ವಾಸ ಮಾಡುವವರು ಮಾತ್ರ ಇರಬೇಕು. ಅನೇಕ ಸ್ಲಂಗಳಲ್ಲಿ ಬಾಡಿಗೆ ಕೊಡುವ ವ್ಯವಸ್ಥೆ ಇದೆ. ಅಂಗಡಿಗಳನ್ನು ಕಟ್ಟಿಸಿರತಕ್ಕಂಥದ್ದು, ಹೋಟೆಲ್‌ಗಳನ್ನು ಕಟ್ಟಿಸಿರತಕ್ಕಂಥದ್ದು, ಬೇರೆ ಬೇರೆ ರೀತಿಯಾಗಿ ಇದನ್ನು ಉಪಯೋಗಿಸುವ ವ್ಯವಸ್ಥೆ ಇವತ್ತು ಆಗಿದೆ. ಇದಕ್ಕೆ ಎಲ್ಲಾ ಕಡಿವಾಣ ಹಾಕಬೇಕು. ಈ ದೃಷ್ಟಿಯಿಂದ ಇದನ್ನು ಮಾಡಬೇಕೆಂದು ನನ್ನ ವಿನಂತಿ ಇವತ್ತು ಬೆಳಿಗ್ಗೆ ಮಾನ್ಯ ಕಂದಾಯ ಸಚಿವರು 250 ಕೋಟಿ ರೂಪಾಯಿ ಎಕ್ಸಮ್‌ಷನ್ ಕೊಡತಕ್ಕ ಒಂದು ತಿದ್ದುಪಡಿಯನ್ನು ತಂದರು. ಇಲ್ಲಿ ಏನಾದರೂ ಮಾಡಿ ಅವರ ಖಾತೆ ಅವರಿಗೆ ಕೊಡುವಾಗ ಸ್ಟ್ಯಾಂಪ್ ಡ್ಯೂಟಿ ಎಕ್ಸ್‌ಮ್‌ಷನ್ ಇದೆಯಾ ಎಂದು ತಿಳಿಸಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯಾ(ಕನಕಪುರ):- ಮಾನ್ಯ ಅಧ್ಯಕ್ಷರೆ, ಮಾನ್ಯ ವಸತಿ ಸಚಿವರು ಮಂಡಿಸಿರತಕ್ಕಂತಹ ಈ ಒಂದು ಮಸೂದೆಯಿಂದ ನನಗೆ ಬಹಳ ನಿರಾಶೆಯಾಗಿದೆ. ಅವರು ಇನ್ನು ಸ್ವಲ್ಪ ತಾಳ್ಮೆಯಿಂದ ಇನ್ನು ಸ್ವಲ್ಪ ದಿನಗಳ ಕಾಲ ಈ ಇಲಾಖೆಯ ಜವಾಬ್ದಾರಿ ತೆಗೆದುಕೊಂಡ ಮೇಲೆ ವಿಷಯಗಳನ್ನು ಅರಿತುಕೊಂಡು ಮಾಡಿದ್ದರೆ ಉತ್ತಮವಾಗಿತ್ತು. ಬಹಳ ಸಂಘ ಸಂಸ್ಥೆಗಳು ಈ ಕೊಳಚಿ ನಿರ್ಮೂಲನ ಕೆಲಸಕ್ಕೋಸ್ಕರ ಕೆಲಸ ಮಾಡುತ್ತಿವೆ. ಕರ್ನಾಟಕ ಕೊಳಚಿ ನಿವಾಸಿಗಳ ಸಂಘ ಎಂದು 'Ruth Manorama' ಎಂಬ ಒಬ್ಬ ಹೆಣ್ಣುಮಗಳು ಇದ್ದಾರೆ. ಬಹಳ ಒಳ್ಳೆಯ ಕೆಲಸವನ್ನು ಆಕೆ ಬೆಂಗಳೂರು ನಗರದ ಮಟ್ಟಿಗೆ, ಶಿವಮೊಗ್ಗ ಮತ್ತು ಬಳ್ಳಾರಿ ಮತ್ತಿತರ ಕಡೆಗಳಲ್ಲಿ ಮಾಡುತ್ತಿದ್ದಾರೆ. ಇನ್ನು ಅನೇಕ ಸಂಘ ಸಂಸ್ಥೆಗಳು ಕೆಲಸ ಮಾಡುತ್ತಿವೆ. ಅವರನ್ನೆಲ್ಲಾ ಕರೆಸಿ ಮಾತನಾಡಿ ಬಹಳ ಮುಖ್ಯವಾಗಿ ನಮ್ಮ ಮಂತ್ರಿಗಳಿಗೆ ನನ್ನ ಸಲಹೆ ಏನೆಂದರೆ, 1999ರಲ್ಲಿ ನಡೆದಂತಹ ಚುನಾವಣೆಯಲ್ಲಿ ಕರ್ನಾಟಕದ ಜನತೆಗೆ ಒಂದು ಭರವಸೆಯನ್ನು ಕೊಟ್ಟಿದ್ದೀರಿ. ಕಾಂಗ್ರೆಸ್‌ನ ಚುನಾವಣಾ ಪ್ರಣಾಳಿಕೆ ಬಗ್ಗೆ ನಾನು ಮಾನ್ಯ ಮಂತ್ರಿಗಳಲ್ಲಿ ಬೇಡಿಕೊಳ್ಳುವುದೇನೆಂದರೆ, ದಯವಿಟ್ಟು ಚುನಾವಣಾ ಪ್ರಣಾಳಿಕೆಯನ್ನು ಕನಿಷ್ಟಪಕ್ಷ ಆಗಾಗ ಒಂದು ವರ್ಷದಲ್ಲಿ ಒಂದು ಸಾರಿ ಆದರೂ ಓದತಕ್ಕಂತಹ ಕೆಲಸ ಮಾಡಿದರೆ ಬಹಳ ಉಪಯೋಗವಾಗುತ್ತದೆ ಎಂದು ನಾನು ಭಾವಿಸಿಕೊಂಡಿದ್ದೇನೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ಮೊನ್ನೆ 1999ರ ಚುನಾವಣೆ ಮುನಿಸಿಪಾಲಿಟಿ ಚುನಾವಣೆ ಹಾಗೂ ಕಾರ್ಪೋರೇಷನ್ ಚುನಾವಣೆಗಳನ್ನು ನೆನೆಪಿಸಿಕೊಂಡರು. ನಾವು ಜನಗಳಿಗೆ ಏನು ಭರವಸೆ ಕೊಟ್ಟಿದ್ದೇವೆ. ಆ ಭರವಸೆಗಳಿಗೆ ಅನುಗುಣವಾಗಿ ನಡೆದುಕೊಳ್ಳಬೇಕೆಂದು ಅವರು ಹೇಳಿದರು. ಮಾನ್ಯ ಸಗೀರ್ ಅಹಮದ್‌ರವರು ವಸತಿ ಸಚಿವರಾದ ಮೇಲೆ ಕರ್ನಾಟಕದ ಕೊಳಚಿ ಪ್ರದೇಶಗಳಲ್ಲಿ ಇರತಕ್ಕಂತಹ ಲಕ್ಷಾಂತರ ನಿವಾಸಿಗಳಿಗೆ ಕಾಂಗ್ರೆಸ್ ಪಕ್ಷ ಏನು ಭರವಸೆ ಕೊಟ್ಟಿದೆ ಎನ್ನುವುದನ್ನು ಬಹುಶಃ ಓದಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಈ ಮಸೂದೆ ಮಂಡನೆ ಮಾಡುವುದಕ್ಕೆ ಮುಂಚೆ ಅವರು ಅದನ್ನು ಓದಿಲ್ಲ. I am sure about it. ಸೆಕ್ರೆಟರಿ ಸ್ಲಂ ಬೋರ್ಡ್ ಎಂದು ಹೇಳಿ ಒಬ್ಬ ಉಪ ಕಾರ್ಯದರ್ಶಿಯ ಅಪಾಯಿಂಟ್ ಮಾಡಿದ್ದಾರೆ. ಅವರಿಗೆ ಬಹುಶಃ ಕಮಿಷನರ್ ಎಂದು ಅನ್ನಿಸಿಕೊಳ್ಳಬೇಕೆಂದು ಬಹಳ ಆಸೆ ಇದೆ ಎಂದು ಕಾಣುತ್ತದೆ. ಬಹಳಷ್ಟು ಬಿಲ್‌ಗಳನ್ನು ಪ್ರಪೋಸ್ ಮಾಡುವಾಗ ನನ್ನ ಗಮನದಲ್ಲಿ

ಬಂದಿರತಕ್ಕಂಥದ್ದು ಏನೆಂದರೆ, ನಮ್ಮ ಅಫೀಸರ್‌ಗಳು ಚಟಕ್ಕೋಸ್ಕರ ಅನೇಕ ಕಾನೂನುಗಳನ್ನು ಮಾಡಿಸಿ ನಿರಾಶನಗೊಳಿಸುತಕ್ಕಂಥದ್ದನ್ನು ನಾವು ನೋಡುತ್ತೇವೆ. It is a waste of time, according to me. ಒಂದೆರಡು ಅಂಶಗಳು ಇವೆ ಇಲ್ಲವೆಂದು ನಾನು ಹೇಳುವುದಿಲ್ಲ. ಉದಾಹರಣೆಗೆ ಲೋಕಲ್ ಅಥಾರಿಟಿ ಮತ್ತು ಗವರ್ನಮೆಂಟ್ ಲ್ಯಾಂಡ್‌ನಲ್ಲಿ ಸ್ಲಂ ಡೆವಲಪ್ ಆಗಿದೆ ಅದನ್ನು ಫ್ರೀಯಾಗಿ ಕೊಡುವ ಕಾನೂನು ತಿದ್ದುಪಡಿ ತಂದಿದ್ದೀರಿ. ಇದರಲ್ಲಿ, as it is they are there. ಅವರ ಲಿವಿಂಗ್ ಕಂಡೀಷನ್‌ನಲ್ಲಿ ಏನೂ ಇಂಪ್ರೂವ್ ಆಗುವುದಕ್ಕೆ ಸಾಧ್ಯವಿಲ್ಲ. ಇದುವರೆಗೆ ಗುರುತಿನ ಚೀಟಿ ಇತ್ತು, ಈಗ ಹಕ್ಕುಪತ್ರ ಕೊಡುತ್ತಿದ್ದೀರಿ. ಆದರೆ ಈ ಹಕ್ಕುಪತ್ರ ಕೊಡುವಾಗ ಬಹಳ ಎಚ್ಚರಿಕೆಯಿಂದ ತಾವು ಇರಬೇಕಾಗುತ್ತದೆ. ಏಕೆ ಹಕ್ಕು ಪತ್ರ ಕೊಡಲಿಲ್ಲ? ನಮಗೆ ಗೊತ್ತಿರುವ ಹಾಗೆ ಧೀಮಂತ ನಾಯಕರಾದ ಶ್ರೀಮಾನ್ ದೇವರಾಜ ಅರಸ್‌ರವರು ಕರ್ನಾಟಕ ನೋಡಿದ ಒಬ್ಬ ಧೀಮಂತ ನಾಯಕ. ಕಾಂಗ್ರೆಸ್ ಸರ್ಕಾರದಲ್ಲಿ ಅವರು ಮುಖ್ಯ ಮಂತ್ರಿಗಳಾಗಿದ್ದರು. ಅವರ ಕಾಲದಲ್ಲಿ ಅನೇಕ ಕೊಳಚಿ ನಿರ್ಮೂಲನ ಪ್ರದೇಶದ ಕೆಲಸಗಳು ಆಗಿದೆ ಮತ್ತು ವಿಶೇಷವಾಗಿ ಶ್ರೀಮಾನ್ಯ ಐಪಿಡಿ ಸಾಲಪ್ಪನವರನ್ನು ನಾನು ಈ ಸದನದಲ್ಲಿ ನೆನಸಿಕೊಳ್ಳುತ್ತೇನೆ. ಬಹಳ ಒಳ್ಳೆಯ ಕೆಲಸ ಮಾಡಿದ ಪುಣ್ಯಾತ್ಮರು, ಇದನ್ನು ಮಾಡಿದಾಗ ಏಕೆ ಈ ಹಕ್ಕು ಪತ್ರ ಕೊಡುವುದು ಮಾಡಲಿಲ್ಲ ಎಂದರೆ, ಪ್ರತಿನಿತ್ಯ ಸಹಿತ ಬೃಂದಾವನ ಎಕ್ಸ್‌ಪ್ರೆಸ್ ಬಂದಾಗ ಯಾರು ಬರುತ್ತಾರೆಂದು ತಾವು ಗಮನಿಸಬೇಕು. ಇವತ್ತು ಚೆನ್ನೈಯಿಂದ ಎಷ್ಟು ಟ್ರೈನ್ ಬರುತ್ತವೆ. ಯಾರು ಇಲ್ಲಿಗೆ ಬಂದು ಕೊಳಚಿ ಪ್ರದೇಶಗಳಲ್ಲಿ ಇರುತ್ತಾರೆಂದು ನೀವು ಬಹಳ ಪ್ರಮುಖವಾಗಿ ಗಮನಿಸಬೇಕಾಗುತ್ತದೆ. ಈಗ ಅನೇಕರು ಬಂದಿದ್ದಾರೆ. ರಾತ್ರೋ ರಾತ್ರಿ ಬರುತ್ತಿದ್ದಾರೆ In fact at this hour, I would like to compliment this Government also on one account. ಬಿಡಿಎದವರು ಬಹಳ ಒಳ್ಳೆಯ ಕೆಲಸಗಳನ್ನು ಮಾಡುತ್ತಿದ್ದಾರೆ. ಅಧಿಕಾರಿಗಳ ಹೆಸರು ಹೇಳಬಾರದು ಎನದು ನೀವೇ ಹೇಳುತ್ತೀರಿ. ಈಗ ಹೇಳಬೇಕೆಂದು ಹೇಳುತ್ತೀರಿ. ಒಳ್ಳೆಯ ಕೆಲಸ ಮಾಡಿದವರಿಗೆ ಮಾತ್ರ ಹೇಳಬೇಕು ತಪ್ಪು ಮಾಡಿದವರಿಗೆ ಹೇಳಬಾರದೇ? He is doing Mr, Jayakar Jerome, is doing good job and the Government is supporting him. We should all appreciate that. I also join the Chief Minister and your kindself to appreciate the good work done by the Bangalore Development Authority. We are all proud of that organisation, right now. ನನಗೆ ಏನನ್ನಿಸುತ್ತದೆ ಎಂದರೆ, ಗವರ್ನಮೆಂಟ್ ಎಂಪವರ್ ಮಾಡಿ ಇಲ್ಲಿ ಸ್ಲಂ ಬೋರ್ಡ್‌ಗೆ ಲೇಔಟ್ ಮಾಡತಕ್ಕಂಥದ್ದಕ್ಕೆ ಪವರ್ಸ್ ತೆಗೆದುಕೊಂಡಿದ್ದೀರಿ. ಇದು ಒಳ್ಳೆಯ ಕೆಲಸ 2-3 ಎಚ್ಚರಿಕೆಯನ್ನು ಅಟ್‌ಲೀಸ್ಟ್ ರೂಲ್ಸ್ ಮಾಡುವಾಗ ತೆಗೆದುಕೊಳ್ಳಿ. ನನ್ನನ್ನು ವೈಯಕ್ತಿಕವಾಗಿ ಕೇಳುವುದೇ ಆದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಜೀತದಾಳು ಹಾಗೆ ದುಡಿಯುವವರು ಸಗೀರ್ ಅಹಮದ್. He is a very committed Congressman. ಚೆನ್ನೈ ಮತ್ತು ಮುಂಬೈಗಳಲ್ಲಿ ಹೋಗಿ ನೋಡಿ ಸ್ಲಂ ಡ್ವೆಲ್ಲರ್ಸ್‌ಗೆ ಯಾವ ರೀತಿ ಮಾಡಿದ್ದಾರೆ. ಕರುಣಾನಿಧಿಯವರ ಕಾಲದಲ್ಲಿ ಎಷ್ಟು ಒಳ್ಳೆಯ ಕೆಲಸವಾಗಿದೆ ಎಂದು ನೋಡಿಕೊಂಡು ಬಂದು ಈ ರೀತಿ ಬಿಲ್ಡಿಂಗ್ಸ್ ಕಟ್ಟುವುದಕ್ಕೆ ನಮ್ಮ ಕೈಯ್ಯಲ್ಲಿ ಆಗಲಿಲ್ಲ We have failured miserably ಕಾಂಗ್ರೆಸ್ ಮ್ಯಾನಿಫೆಸ್ಟೋ ಬಗ್ಗೆ ನಾನು ಮೆನ್‌ಷನ್ ಮಾಡಿದರೆ ನಿಮಗೆ ಕೋಪ ಬರುತ್ತದೆ. ಅದರಲ್ಲಿ ಎಲ್ಲಾ ಆಕಾಶ ತೋರಿಸಿದ್ದಾರೆ. ಬೆಂಗಳೂರು

ಮಹಾ ಪಾತಕಿಗಳ ನಗರ, ಬಿಹಾರ ಬಿಟ್ಟರೆ ಬೆಂಗಳೂರು ಬೆಂಗಳೂರನ್ನು ಸರಿ ಮಾಡುತ್ತೇವೆಂದು ಹೇಳಿದರು. ನೀವು ಬೆಳಿಗ್ಗೆ ಹೊತ್ತು ವಾಕಿಂಗ್ ಮಾಡುವುದಿಲ್ಲವೆಂದು ಕಾಣುತ್ತದೆ.

ಅಧ್ಯಕ್ಷರು:- ನನಗೆ ಏಕೆ ಕೋಪ ಬರಬೇಕು?

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ನೀವು ಮ್ಯಾನಿಫೆಸ್ಟೋ ಬರೆಯುವಾಗ ಅಲ್ಲಿಯೇ ಇದ್ದಿರಿ. ನೀವು ನಿಷ್ಠಾವಂತ ಕಾಂಗ್ರೆಸ್ಸಿಗರೂ ಆಗಿದ್ದಿರಿ. ಚೆನ್ನೈನಲ್ಲಿ ಮತ್ತು ಮುಂಬೈನಲ್ಲಿ ಎಷ್ಟು ಒಳ್ಳೆಯ ಕಟ್ಟಡಗಳನ್ನು ಅವರು ಕಟ್ಟಿದ್ದಾರೆಂದು ತಾವು ಗಮನಿಸಿದರೆ ಅವರು ತೆಗೆದುಕೊಂಡಿರುವ ಪ್ರೋಗ್ರಾಮ್ಸ್ ಏನಿವೆ ಅದಕ್ಕೆ ಫರ್ಸ್ಟ್ ಪ್ರೈಯಾರಿಟಿ ಕೊಡುತ್ತಾರೆ. ನಿಮ್ಮ ಮ್ಯಾನಿಫೆಸ್ಟೋದಲ್ಲಿ ಎರಡು ಪಾಯಿಂಟ್ಸ್ ಹೇಳಿದ್ದೀರಿ. ಒಂದು ಪಾತಕಿಗಳ ನಗರ ಬಿಹಾರ ಬಿಟ್ಟರೆ ಎರಡನೆಯದು ಬೆಂಗಳೂರು ಎಂದು ಹೇಳುತ್ತಾರೆ. ಬಹುಶಃ ತಾವು ವಾಕಿಂಗ್ ಹೋಗುವುದಿಲ್ಲ ಎಂದು ಕಾಣುತ್ತದೆ. ಹಾಗೆ ಹೋದರೂ ಗಾಲ್ಫ್ ಗ್ರೌಂಡ್‌ಗೆ ಹೋಗುತ್ತೀರಿ ಎಂದು ಕಾಣುತ್ತದೆ.

ಅಧ್ಯಕ್ಷರು:- ಇಲ್ಲ, ನಾನು ವಾಕಿಂಗ್ ಹೋಗುವುದಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ತಾವು ವಾಕಿಂಗ್ ಹೋಗುವುದು ಒಳ್ಳೆಯದು ಸ್ವಾಮಿ ವಾಕಿಂಗ್ ಹೋಗುವಾದ ಜನರ-ಪಬ್ಲಿಕ್ ಒಪೀನಿಯನ್ ಫೀಲ್ ಆಗುತ್ತದೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಹೋಗುತ್ತಾರೆ. ಅದಕ್ಕೆ ಅವರು ಇತ್ತೀಚೆಗೆ ಬಹಳ ಸೌಮ್ಯವಾಗಿ ಸದನದಲ್ಲಿ ಕುತಿರುತ್ತಾರೆ. ಜಗಳಕ್ಕೆ ಬರುವುದಿಲ್ಲ. ಗವರ್ನಮೆಂಟ್ ಬಗ್ಗೆ ಒಪೀನಿಯನ್ ಏನು ಎನ್ನುವುದನ್ನು ಪಕ್ಕದಲ್ಲಿ ವಾಕಿಂಗ್‌ಗೆ ಬರುವವರು ಅವರಿಗೆ ಹೇಳುತ್ತಾರೆ. ಅವರು ವಾಕಿಂಗ್ ಹೋಗುತ್ತಾರೆ. ನಾನು ನೋಡಿದ್ದೇನೆ. ಬೆಳಿಗ್ಗೆ ಎದ್ದು ವಾಕಿಂಗ್ ಹೋಗುತ್ತಾರೆ. ಆದ್ದರಿಂದ ಮಾನ್ಯ ಅಧ್ಯಕ್ಷರೆ, ಜನ ಬಹಳ ಭಯಸ್ತರಾಗಿದ್ದಾರೆ. ಗೃಹ ಇಲಾಖೆ ಬಗ್ಗೆ ಮಾತನಾಡುವುದು ಬಹಳ ಇತ್ತು. ಕಾರಣಾಂತರಗಳಿಂದ ಸಮಯವಾಗಲಿಲ್ಲ. ಸ್ಲಂ ಇಂಪ್ರೂವ್‌ಮೆಂಟ್ ಬಗ್ಗೆ ತಾವು ಮ್ಯಾನಿಫೆಸ್ಟೋದಲ್ಲಿ ಏನು ಹೇಳಿದ್ದೀರಿ ಅದರ ಒಂದು ಅಂಶ ಇದರಲ್ಲಿ ಸೇರಿಲ್ಲ ಮತ್ತೆ ನಿಮಗೆ ದುಡ್ಡು ಇಲ್ಲ. ರೈಟ್‌ಲಿ ನಮ್ಮ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಏಳರಿಂದ ಎಂಟು ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೆವು. ಯಾವುದು ಡಿಕ್ಲೇರ್ ಸ್ಲಂ ಇದೆ ಡಿಪೆಂಡಿಂಗ್ ಆನ್ ದಿ ಪಾಪುಲೇಷನ್ ನಾವು ಪ್ರತಿಯೊಂದಕ್ಕೂ ಸಹಿತಕೊಡುತ್ತಿದ್ದೇವು ಕಳೆದ ವರ್ಷ ಏನೂ ಬಂದಿಲ್ಲ. ಒಂದೊಂದು ಸ್ಲಂಗೆ ಒಂದು ಲಕ್ಷ 15,000 ರೂಪಾಯಿ ಕೊಟ್ಟಿದ್ದಾರೆ. 1.15 ಲಕ್ಷ ರೂಪಾಯಿಗಳು ಯಾವುದಕ್ಕೂ ಸಾಕಾಗುವುದಿಲ್ಲ. ಬೋರ್‌ವೆಲ್ ರಿಪೇರಿ ಮಾಡುವುದಕ್ಕಾಗುವುದಿಲ್ಲ, ಲೈಟ್ ಹಾಕಿಸುವುದಕ್ಕೆ ಆಗುವುದಿಲ್ಲ. ದುಡ್ಡು ಇಲ್ಲದೇ ನಮ್ಮ ಚಂದ್ರೇಗೌಡರು ಕೋಪ ಮಾಡಿಕೊಂಡು ಬಿಟ್ಟರು. ಬಂಡವಾಳ ಇಲ್ಲದೆ ಇರತಕ್ಕಂತಹ ಸರ್ಕಾರ ಬಡಾಯಿ ಹೊಡೆಯುತ್ತದೆ ಎಂದು ಹೇಳಿದರೆ ನಿಮ್ಮ ಸರ್ಕಾರವೂ ಹಾಗೆಯೇ ಎಂದು ಹೇಳಿದರು. ಇದಕ್ಕೆ ಉತ್ತರ ಕೊಡಲ್ಲೊಲ್ಲರು. ಕೇಂದ್ರ ಸರ್ಕಾರದವರು ನನಗೆ ಗೊತ್ತಿರುವ ಹಾಗೆ ಪ್ರತಿಯೊಂದು ಸ್ಲಂಬೋರ್ಡ್‌ಗೆ ಸಹಿತ ಡೆವಲಪ್‌ಮೆಂಟ್‌ಗೋಸ್ಕರ ಎಂದು ದುಡ್ಡು ಕೊಡುತ್ತಾರೆ. ಅದನ್ನು ಸರಿಯಾಗಿ ಉಪಯೋಗಿಸಿಕೊಂಡಿಲ್ಲ. ಶ್ರೀಮಾನ್ ದೇವೇಗೌಡರು ಪ್ರಧಾನಿಗಳಾಗಿದ್ದ ಸಂದರ್ಭದಲ್ಲಿ ಆಕ್ಸಲರೇಟೆಡ್ ಇರಿಗೇಷನ್ ಸ್ಕೀಮ್‌ಗೆ ರಾಜ್ಯಕ್ಕೆ ಇತಿಹಾಸದಲ್ಲಿ ಮೊದಲ ಬಾರಿ ಸ್ವಾತಂತ್ರ್ಯ ನಂತರದ ದಿನಗಳಲ್ಲಿ ಯಾವ ಪ್ರಧಾನಿಗಳು ಸಹಿತ ಮಾಡುವುದಕ್ಕಾಗಿರಲಿಲ್ಲ. ಸ್ಟೇಟ್ ಗವರ್ನಮೆಂಟ್‌ಗೆ ಇರಿಗೇಷನ್ ಡೆವಲಪ್‌ಮೆಂಟ್‌ಗೆ ದುಡ್ಡು ಕೊಡತಕ್ಕಂತಹ ಕೆಲಸ ಮಾಡಿದರು. ಏಳೆಂಟು ವರ್ಷಗಳಲ್ಲಿ ಸಾವಿರದಿಂದ ಎರಡು ಸಾವಿರ

ಕೋಟಿ ರೂಪಾಯಿ ಕರ್ನಾಟಕ ರಾಜ್ಯಕ್ಕೆ ಅದರಿಂದ ಬಂದಿದೆ. ಅದೇ ರೀತಿ ಸ್ಲಂ ಇಂಪ್ರೂವ್‌ಮೆಂಟ್‌ಗೋಸ್ಕರ ಕೊಟ್ಟಿದ್ದಾರೆ. ಅದನ್ನು ಇವರು ಉಪಯೋಗಿಸಿಕೊಂಡಿದ್ದಾರೆಯೇ ಎಂಬುದನ್ನು ಸದನಕ್ಕೆ ಹೇಳಬೇಕೆಂದು ತಿಳಿಸಬೇಕೆಂದು ಹೇಳಿ ಚೀಫ್ ಎಕ್ಸಿಕ್ಯುಟೀವ್ ಆಫೀಸರನ್ನು ಕಮಿಷನರ್ ಎಂದು ಕರೆದಿದ್ದೀರಿ. ಅದೇನು ಇನ್ನೊಬ್ಬ ಐ.ಎ.ಎಸ್. ಆಫೀಸರ್‌ಗೆ ಹಾಕುವುದಕ್ಕೋ, ಬೇರೆ ಏತಕ್ಕೋ, ನನಗೆ ಇದರ ಉದ್ದೇಶ ಕರೆಕ್ಟಾಗಿ ಗೊತ್ತಾಗುತ್ತಿಲ್ಲ. ಸೆಕ್ರೆಟರಿಗೂ ಕಮಿಷನರ್‌ಗೂ ವ್ಯತ್ಯಾಸವೇನು ಎಂಬುದು ನನಗೆ ಗೊತ್ತಾಗುತ್ತಿಲ್ಲ. ಸ್ಲಮ್ಸ್ ಡ್ಯೂಗಳನ್ನು ಬೋರ್ಡ್ ರಿಕವರಿ ಮಾಡಬಹುದು ಎಂದು ಇದೆಯಲ್ಲಾ, this is a very dangerous section. ಈಗ ರಿಕವರಿ ಮಾಡಬೇಕು. Rightly of wrongly ನಾವೆಲ್ಲಾ ಏನೂ ಮಾಡಿದ್ದೇವೆ ಎಂದರೆ, ಎರಡೂ ಪಾರ್ಟಿಯವರು, ಇವರಿಗಿನ್ನೂ ಅಧಿಕಾರ ಸಿಕ್ಕದೇ ಇರುವುದರಿಂದ ಅವರಿನ್ನೂ ಆ ಕೆಲಸಕ್ಕೆ ಹೋಗಿಲ್ಲ, ನಾವಿಬ್ಬರೂ ಈ ಸ್ಲಮ್‌ನಲ್ಲಿ ಇರತಕ್ಕಂಥ ಜನಗಳಿಗೆ ಮತ್ತು ಜನತಾ ಮನೆಗಳನ್ನು ಕಟ್ಟತಕ್ಕಂಥವರಿಗೆ, ನೀವು ದುಡ್ಡೇ ಕೊಡುವಂತಿಲ್ಲ ಎಂದು ಹೇಳಿದ್ದೇವೆ. ಲೋನ್ ಕಾಂಪೋನೆಂಟ್ ಬಗ್ಗೆ ನಾವು ಅವರಿಗೆ ಹೇಳಿಯೇ ಇಲ್ಲ. ನಾವಂತೂ ಹೇಳಿಲ್ಲ. ತಾವು ಮುಳುಬಾಗಿಲಿನಲ್ಲಿ ಹೇಳಿದ್ದೀರೋ ಏನೋ ನನಗೆ ಕರೆಕ್ಟಾಗಿ ಗೊತ್ತಿಲ್ಲ. ನಾವಂತೂ ಲೋನ್ ಕಾಂಪೋನೆಂಟ್ ಇದೆ ಎನ್ನುವುದನ್ನು ಯಾರಿಗೂ ಹೇಳಿಲ್ಲ. ರೈಟ್ ಆಫ್ ಮಾಡಿದ್ದೇವೆ ಎನ್ನುವ ಮಟ್ಟದಲ್ಲಿ we have created their minds. ಹೀಗಾಗಿ ನೀವು ಈಗೇನು ಮಾಡುತ್ತಿದ್ದೀರಿ ಎಂದರೆ, ಆ ರಿಕವರಿ ಅಥಾರಿಟಿಯನ್ನು ನೀವು ತೆಗೆದುಕೊಳ್ಳುವುದಕ್ಕೆ ಮಾಡುತ್ತಿದ್ದೀರಿ, ಇದನ್ನು ಸ್ವಲ್ಪ ಕೇರ್‌ಫುಲ್ಲಾಗಿ, ಸ್ಲಮ್‌ನಲ್ಲಿರತಕ್ಕಂಥ ಜನಗಳಿಗೆ ಎಜ್ಯುಕೇಷನ್ ಕೊಟ್ಟು, ತೊಂದರೆಯಾಗದೇ ಇರುವ ಹಾಗೆ ರಿಕವರಿ ಆಗಬೇಕಾಗುತ್ತದೆ. ರಿಕವರಿ ಆಗಬೇಕು. I am not against recovery. ದುಡ್ಡನ್ನು ಎಲ್ಲಿಂದ ತರಲಿಕ್ಕಾಗುತ್ತದೆ? ರಿಕವರಿ ಮಾಡಬೇಕು. ರಿಕವರಿ ಮಾಡುವಾಗ ಸ್ವಲ್ಪ ಎಚ್ಚರಿಕೆಯಿಂದ ನೀವು ರೂಲ್ಸ್ ಅನ್ನು ಫ್ರೇಮ್ ಮಾಡತಕ್ಕಂಥ ಸಂದರ್ಭದಲ್ಲಿ corruption ಗೆ ಅವಕಾಶ ಇಲ್ಲದಂತೆ, ಸ್ಲಮ್ ಲಾರ್ಡ್‌ಗಳಿಗೆ...........

ಅಧ್ಯಕ್ಷರು:- ಅದೊಂದೇ ಅಲ್ಲ, ಇನ್‌ಸ್ಟಾಲ್‌ಮೆಂಟ್ಸ್ ಅನ್ನು ಅವರಿಗೆ ಕೊಡಬೇಕು. ಒಂದೇಸಲ ಅಷ್ಟೊಂದು ದುಡ್ಡನ್ನು ಅವರು ಎಲ್ಲಿಂದ ತರುತ್ತಾರೆ?

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಮಾನ್ಯ ಅಧ್ಯಕ್ಷರು ಬಹಳ ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ತಮ್ಮ ತಲೆಗೆ ಅದು ಬಹಳ ಹಿಡಿಸುತ್ತದೆ ಎಂದು ಕಾಣಿತ್ತದೆ ತಾವು ದಯವಿಟ್ಟು ಅದನ್ನು ಗಮನದಲ್ಲಿಟ್ಟುಕೊಂಡು ಈ ಕೆಲಸ ಮಾಡಿದರೆ ಒಳ್ಳೆಯದಾಗುತ್ತದೆ. ಇನ್‌ಸ್ಟಾಲ್‌ಮೆಂಟ್ ಕೂಡ ಸ್ವಲ್ಪ ಲಿಬರಲ್ಲಾಗಿ ಇರಬೇಕು ಎಂದು ನಾನು ಈ ಸಂದರ್ಭದಲ್ಲಿ ಕೇಳುವುದಕ್ಕೆ ಬಯಸುತ್ತೇನೆ. ಇನ್ನೊಂದು ತಾವು. ಡೇಜರಸ್ ಸೆಕ್ಷನ್ನೋ ಅಥವಾ ಯಾವ ಇನ್‌ಟೆನ್‌ಷನ್‌ನಿಂದ ಈ ಶಬ್ದಗಳನ್ನು ಉಪಯೋಗಿಸಿದ್ದೀರಿ ಎನ್ನುವುದು ನನಗೆ ಗೊತ್ತಾಗುವುದಿಲ್ಲ. To empower the Board, to lease - ಅಲಾಟ್ ಸರಿ, ಅಲಾಟ್ ಮಾಡುವುದಕ್ಕೆ ನಿಮಗೆ ಹಕ್ಕಿದೆ, ಅಲಾಟ್ ಮಾಡಿ, or to sell the properties formed in the lay-out to the slum dwellers ಎಂದು ಹೇಳಿದ್ದೀರಿ. ಸ್ಲಮ್ ಡ್ವೆಲ್ಲರ್ಸ್‌ಗೆ ಅದನ್ನು ಲೀಸ್ ಮಾಡತಕ್ಕದ್ದು ಮತ್ತು ಸೇಲ್ ಮಾಡತಕ್ಕದ್ದು ಎಲ್ಲಿ ಬರುತ್ತದೆ? I am yet to understand. ಸ್ಲಮ್ ಡ್ವೆಲ್ಲರ್ ಒಬ್ಬನಿಗೆ ಅಲ್ಲಿತಕ್ಕಂಥ

ಲಕ್ಷಾಂತರ ರೂಪಾಯಿಯ ಪ್ರಾಪರ್ಟಿಗಳನ್ನು ತೆಗೆದುಕೊಳ್ಳುವಷ್ಟು ಶಕ್ತಿ ಅವನಿಗೆ ಬರುವುಧಾದಲ್ಲಿ, He is not eligible to stay in the slum. ಹೇಗೆ ಇದು ಬಂತು? ಏಕೆ ಇದು ಬಂದು? ಇದು contradition ಇದೆ ನನಗೆ. ಅಥವಾ ನೀವು ಬೇರೆ ಇನ್ನು ಯಾವುದಾದರೂ ಉದ್ದೇಶಗಳನ್ನು ಇಟ್ಟುಕೊಂಡು ಯಾರಿಗಾದರೂ, ಕೆಲವರೆಲ್ಲಾ ಅಲ್ಲಿಂದ ಇಲ್ಲಿಂದ ಲ್ಯಾಂಡ್ ಅನ್ನು ತೆಗೆದುಕೊಳ್ಳುವುದಕ್ಕೆ ಬರುತ್ತಾರೆ. ಅವರಿಗೇನಾದರೂ ಅನುಕೂಲ ಮಾಡಿಕೊಡಲಿಕ್ಕೆ ಈ lease or sale ಎನ್ನತಕ್ಕಂಥದ್ದನ್ನು ನೀವು ಉಪಯೋಗಿಸಿದ್ದೀರೋ ಎನ್ನುವುದರ ಬಗ್ಗೆ ಕ್ಲಾರಿಫಿಕೇಷನ್ ಅನ್ನು ಮಾಡಬೇಕು ಎನ್ನತಕ್ಕಂಥದ್ದನ್ನೂ ಸಹಿತ ನಾನು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಇಲ್ಲಿ ಕೆಲವು ಸೆಕ್ಷನ್ ಅನ್ನು ರಿಪೆಲ್ ಎಂದು ಹೇಳಿದ್ದೀರಿ. ಈಗ ನೀವು ಮಾಡಿರತಕ್ಕಂಥ ಸೆಕ್ಷನ್ಸ್ ಇನ್ನು ನಾಲ್ಕೈದು ವರ್ಷವಾದ ಮೇಲೆ ರಿಪೆಲ್ ಆಗಬಾರದು. ಆ ರೀತಿಯಲ್ಲಿ ನೀವು ಮುನ್ನೆಚ್ಚರಿಕೆ ತೆಗೆದುಕೊಳ್ಳಬೇಕು. ಬಹಳ ಮುಖ್ಯವಾಗಿ ಕಾಂಗ್ರೆಸ್ಸಿನ ಚುನಾವಣಾ ಪ್ರಣಾಳಿಕೆಯಲ್ಲಿ ನೀವು ಏನು ಹೇಳಿದ್ದೀರೋ ಅದರ ಪ್ರಕಾರ ದುಡ್ಡಿನ ವ್ಯವಹಾರ ಆಗುತ್ತಿಲ್ಲ. ಸೈಟ್‌ಗಳನ್ನು ಹಂಚತಕ್ಕಂಥ ವಿಚಾರದಲ್ಲಿ ಬಿ.ಡಿ.ಎ.ನವರು ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಡಿಮಾಲಿಷನ್‌ನಲ್ಲೂ ಸಹಿತ, ಕೆಲವು ಸಾರಿ ನಮಗೆ ಹಿಡಿಸದೇ ಇರಬಹುದು, ಆದರೆ ಸರ್ಕಾರದ ಪ್ರಾಪರ್ಟಿ ಮೇಲೆ ಕುಳಿತುಕೊಂಡಿರತಕ್ಕಂಥ vested interests ಅನ್ನು ತೆಗೆಯತಕ್ಕಂಥ ಕೆಲಸವನ್ನು I appreciate- I appreciate that kind of thing. ಆದರೆ slum development point of view ನಿಂದ, this government is lagging behind. ಈ ಸರ್ಕಾರ ವಿಫಲವಾಗಿದೆ. ಸುಮ್ಮನೆ ನೀವು ಅವರಿಗೆ ತೃಪ್ತಿ ಮಾಡಿ, ಕೊಳಚೆ ಪ್ರದೇಶದಲ್ಲಿ ಇರತಕ್ಕಂಥ ಜನಗಳಿಗೆ ಇದರಿಂದೇನೂ ಅಂತಹ ಮಹತ್ತರವಾಗಿರತಕ್ಕಂಥ ಬದಲಾವಣೆ ಆಗುವುದಿಲ್ಲ. ಮಹತ್ತರವಾದ ಬದಲಾವಣೆ ಆಗಬೇಕಾದರೆ, ನೀವು ಮೂಗಿಗೆ ತುಪ್ಪ ಹಚ್ಚಿದಂತೆ ವಾಸನೆ ನೋಡಿಕೊಂಡು ಊಟ ಮಾಡಿಕೊಂಡು ಬಿಡು, ನಿನಗೆ ಏನು ಸಿಗುತ್ತದೋ ಅದೇ ಎಂದ್ಹೇಳಿ, ತುಪ್ಪ ಹಚ್ಚಿದಂತೆ ಇದೆಯೇ ಹೊರತು ಇದರಿಂದೇನೂ ಉಪಯೋಗ ಇಲ್ಲ. ತಾವು ದಯವಿಟ್ಟು ಮುಖ್ಯಮಂತ್ರಿಗಳ ಮೇಲೆ ಪ್ರಿವೈಲ್ ಅಪಾನ್ ಆಗಿ ಸಪ್ಲಿಮೆಂಟರಿ ಬಜೆಟ್‌ನಲ್ಲಿ ಸಾಕಷ್ಟು ಹಣವನ್ನು ತೆಗೆದುಕೊಳ್ಳುವಂತೆ ಮಾಡಿದರೆ, ಒಳ್ಳೆಯದು ನೀವು ಬೇಕಾದಷ್ಟು ಇನ್ ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್‌ಗೆ ದುಡ್ಡನ್ನು ತರಿಸಿಕೊಳ್ಳುತ್ತಿದ್ದೀರಿ, ಸ್ಲಮ್ ಡೆವಲಪ್‌ಮೆಂಟ್‌ಗೆ ಏಕೆ ತರಿಸಿಕೊಳ್ಳುತ್ತಿಲ್ಲ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. I appreciate Mr. Kharge Sir. ಪೋಲೀಸ್‌ನವರಿಗೆ ಕಟ್ಟಡಗಳನ್ನು ಕಟ್ಟತಕ್ಕಂಥ ವಿಚಾರದಲ್ಲಿ ಸುಮಾರು ಐದಾರು ಸಾವಿರ ಮನೆಗಳನ್ನು ಅವರು ಈ ವರ್ಷದಲ್ಲಿ ಕಟ್ಟಿಸಿಕೊಟ್ಟಿದ್ದಾರೆ. ಆ ರೀತಿ ನೀವೊಂದು ಇಪ್ಪತ್ತು ಸಾವಿರವೋ, ಮೂವತ್ತು ಸಾವಿರೋ, ಐವತ್ತು ಸಾವಿರವೋ ಮನೆಗಳನ್ನು ಸ್ಲಮ್‌ನಲ್ಲಿ ಇರತಕ್ಕ, ಎಲ್ಲಾ ಕಡೆಗಳಲ್ಲೂ ಈಗ ಹುಬ್ಬಳ್ಳಿಯಲ್ಲಿ ಸ್ಲಮ್ ಡೆವಲಪ್ ಆಗಿದೆ, ಬಳ್ಳಾರಿಯಲ್ಲಿ ಸ್ಲಮ್ ಡೆವಲಪ್ ಆಗಿದೆ, ರಾಯಚೂರಿನಲ್ಲಿ ಸ್ಲಮ್ ಡೆವಲಪ್ ಆಗಿದೆ, ಉತ್ತರ ಕರ್ನಾಟಕದ ಬಹುತೇಕ ಕಡೆಗಳಲ್ಲಿ ಈ ಹಳ್ಳಿಯಿಂದ ಬಂದ ಜನವೆಲ್ಲಾ, ಪಟ್ಟಣ ಪ್ರದೇಶಕ್ಕೆ ಬಂದವರೆಲ್ಲಾ ಸ್ಲಮ್‌ಗೆ ಸೇರಿಕೊಂಡು ಬಿಡುತ್ತಾರೆ. In fact, ನಮ್ಮ ಬೆಂಗಳೂರು ಪೋಲೀಸ್ ಕಮಿಷನರ್‌ಗೆ ಒಂದು ಫ್ಯಾನ್ಸಿ ಇತ್ತು. ಅವರ ಫಿಂಗರ್ ಪ್ರಿಂಟ್ಸ್ ಎಲ್ಲಾ ತೆಗೆಸಬೇಕು ಮತ್ತು ಅವರಿಗೆಲ್ಲಾ ಎಂಥದೋ ಐಡೆಂಟಿಫಿಕೇಷನ್ ಕಾರ್ಡ್ಸ್ ಕೊಡಿಸಬೇಕೆಂದು ಹೊರಟಿದ್ದರಂತೆ, ಆಮೇಲೆ ಏನೋ ಸ್ವಲ್ಪ ಜನಗಳಿಂದ ವಿರೋಧ ಬಂತು ಎಂದು ನಾನು

ಕೇಳ್ಪಟ್ಟೆ. ಬಟ್ ಅದು ದುರದ್ದೇಶದಿಂದ ಕೂಡಿರತಕ್ಕದ್ದು ಎಂದು ನಾನು ಹೇಳುವುದಿಲ್ಲ. ಏಕೆಂದರೆ ಈಗ ನೀವು ಒಂದು ಹೆಜ್ಜೆ ಮುಂದೆ ಹೋಗಿದ್ದೀರಿ. ಒಂದು ನಿಜವಾಗಿಯೂ ಒಳ್ಳೆಯ ಕೆಲಸ ನೀವು ಮಾಡುತ್ತಿರುವುದು ಎಂದರೆ, ಇವರಿಗೆ ಹಕ್ಕುಪತ್ರಗಳನ್ನು ಕೊಡುತ್ತಿದ್ದೀರಿ. Permanently they become the owners. ಅವರ ಹಕ್ಕುಪತ್ರ ಕೊಡಬೇಕಾದರೆ, ಇದು ಬಹಳ ಹುಷಾರಿನಿಂದ ಮಾಡಬೇಕಾದ ಕೆಲಸವಾಗಿದೆ. ಈಗಾಗಲೇ ರಾಜಧಾನಿಯಲ್ಲಿ ಕನ್ನಡಿಗರ ಪರಿಸ್ಥಿತಿ ಏನಾಗಿದೆ ಎಂಬುದು ನಿಮಗೆ ಗೊತ್ತಿದೆ. ಇದು ಬೇರೆಯವರ ಪಾಲಿಗೆ ಹೋಗಬಾರದು. ಅದರ ಎಚ್ಚರಿಕೆಯನ್ನು ತಾವು ಸರಿಯಾದಂತಹ ಅಧಿಕಾರಿಗಳಿಗೆ ಕೊಡುವುದರ ಮೂಲಕವಾಗಿ ಮಾಡಬೇಕು ಎನ್ನತಕ್ಕಂಥ ಒತ್ತಾಯ ಮಾಡುತ್ತೇನೆ. Lease or sale ಇದರ ಕಡೆ ಸರ್ಕಾರ ಯಾವಾಗಲೂ ಸಹಿತ ಕಣ್ಣಿಟ್ಟಿರಬೇಕು. ಅವರಿಗೆ ಪಟ್ಟಾ ಅಥವಾ ಹಕ್ಕುಪತ್ರಗಳನ್ನು ಕೊಡತಕ್ಕಂಥ ಸಂದರ್ಭದಲ್ಲಿ, ಕನಿಷ್ಟ ಪಕ್ಷ 20 ವರ್ಷವೋ, 15 ವರ್ಷವೋ ಆ domicile certificate ಅಂತ ಏನಿದೆ, ಅದನ್ನು ಸರ್ಟಿಫೈ ಮಾಡತಕ್ಕಂಥ ವಿಚಾರದಲ್ಲಿ ಗಮನ ಕೊಟ್ಟರೆ ನಿಜವಾಗಿಯೂ ಸಹಿತ ಇದು ಉಪಯೋಗವಾಗುತ್ತದೆ ಎನ್ನತಕ್ಕಂಥ ಮಾತನ್ನು ಹೇಳಿ, 2-3 ವಿಚಾರದಲ್ಲಿ ಕ್ಲಾರಿಫಿಕೇಷನ್ ಕೊಟ್ಟು ಅದರ ಕಡೆಗೆ ಎಚ್ಚರಿಕೆಯನ್ನು ಸರ್ಕಾರ ತೆಗೆದುಕೊಳ್ಳಬೇಕು ಎನ್ನುವಂತಹ ಮಾತನ್ನು ಹೇಳುತ್ತೇನೆ. ಈ ಸಂದರ್ಭದಲ್ಲಿ ಮಾತನಾಡಲು ನನಗೆ ಅವಕಾಶ ಮಾಡಿ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ನನ್ನ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು:- ಮಾನ್ಯ ಸುಬ್ಬಾರೆಡ್ಡಿಯವರೇ, ತಾವು ದಯವಿಟ್ಟು ಎರಡು ನಿಮಿಷ ಮಾತ್ರ ಮಾತನಾಡಿ. ಮಾನ್ಯ ಗುರುಸ್ವಾಮಿಯವರೇ, ಅವರ ನಂತರ ತಾವು ಮಾತನಾಡಿ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ (ಬಸವನಗುಡಿ):- ಮಾನ್ಯ ಅಧ್ಯಕ್ಷರೇ, ಬೆಂಗಳೂರಿನಲ್ಲಿ ಸುಮಾರು 400 ಸ್ಲಮ್ಸ್ ಇವೆ. ಅದರಲ್ಲಿ ಬಸವನಗುಡಿ ಕ್ಷೇತ್ರದಲ್ಲಿ ನಾಲ್ಕು ಸ್ಲಮ್ಸ್ ಇವೆ. ಕೆಂಪಾಂಬುಧಿ ಕೆರೆ ಟ್ಯಾಂಕ್ ಬಂಡ್ ಮೇಲೆ ಒಂದು ಸ್ಲಮ್ ಇದೆ. ಆ ಸ್ಲಮ್ underclared slum. ಮಾನ್ಯ ಮುಖ್ಯಮಂತ್ರಿಗಳೂ ಕೂಡ ಕೆಂಪಾಂಬುಧಿ ಕೆರೆಗೆ ಬಂದಾಗ ಆ ಸ್ಲಮ್ ಅನ್ನು ಬೇರೆ ಕಡೆಗೆ ಬದಲಾವಣೆ ಮಾಡಬೇಕೆನ್ನುವ ಅಭಿಪ್ರಾಯವನ್ನೂ ಸಹಾ ಕೊಟ್ಟರು. ನಂತರ ಅದರ ಬಗ್ಗೆ ಕಾರ್ಪೋರೇಷನ್‌ನವರು ಕರೆಸ್ಪಾಂಡೆನ್ಸ್ ಮಾಡಿದರು ಅವರು ಬಿ.ಡಿ.ಎ.ಗೆ ರಿಕ್ವೆಸ್ಟ್ ಮಾಡಿದ್ದಾರೆ. ಬಿ.ಡಿ.ಎ ಕಮಿಷನರ್ ನಮ್ಮಲ್ಲಿ ಅಷ್ಟು ಜಾಗ ಇಲ್ಲ ಎಂದು ಹೇಳಿದ್ದಾರೆ. ಸುಮಾರು 300 ರಿಂದ 350 ಜನ ಸ್ಲಮ್ ಡ್ವೆಲ್ಲರ್ಸ್ ಅಲ್ಲಿ ಇದ್ದರೆ ಕೆಂಪಾಂಬುಧಿ ಕೆರೆಗೆ ನಾಲ್ಕು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ, ಈ ಟ್ಯಾಂಕ್ ಬಂಡ್ ಮೇಲೆ ಇರತಕ್ಕಂಥ ಸ್ಲಮ್‌ಗೆ ಬೇರೆ ಕಡೆ ಜಾಗ ಬದಲಾಯಿಸಬೇಕು ಎಂದು ಈಗಾಗಲೇ ಗೌರ್ನಮೆಂಟ್‌ನವರು ಮನಸ್ಸು ಮಾಡಿದ್ದಾರೆ. ಆದರೆ ಸ್ಥಳ ಇಲ್ಲವೆಂದು ಈಗಾಗಲೇ ಬಿ.ಡಿ.ಎ.ನವರಿಂದ ಕಾಗದ ಬಂದಿದೆ. ಅವು ಇದ್ದಿದ್ದ ಜಾಗವನ್ನು, ಮೊದಲು ಇದ್ದಂತಹ ಸ್ಥಳದಲ್ಲೇ ಅವರಿಗೆ ಕೊಡಬೇಕಾಗಿತ್ತು. ಅದನ್ನು ಬಿಟ್ಟು ಬೇರೆ ಕಡೆಗೆ ಹಾಕಿದರು. Section of sub section (1) and (2), ಅದು ಬಹಳ important, who can be nominated? ಅದನ್ನು appointed ಅಂತ, ಛೇರ್ಮನ್ ಆಮೇಲೆ ಅದೆಲ್ಲಾ ಡೀಟೈಲ್ಸ್ ಕೊಟ್ಟಿದ್ದಾರೆ. ಆದರೆ ಬಿ.ಡಿ.ಎ.ಗೆ ಇಂಪಾರ್ಟೆಂಟ್ ಪ್ರಾವಿಷನ್ ಕೊಟ್ಟಿಲ್ಲ. ಬೆಂಗಳೂರಿನಲ್ಲಿ 400 ಸ್ಲಮ್ಸ್ ಇರುವಾಗ, BDA Chairman or Secretary or Commissioner must be one of the members ಅಲ್ಲಿ ಇರಬೇಕಾಗಿತ್ತು. ಅದು ಇಲ್ಲ.

ಇಲ್ಲ. ನಂತರ ಬಹುಶಃ ಈ ಸ್ಲಮ್ ಲಾರ್ಡ್ ಎಂದು ಇದ್ದಾರೆ. ಸ್ಲಮ್ ಲಾರ್ಡ್ಸ್ ಎಂದರೆ, ಇವತ್ತು ಹತ್ತು ಜನ ಅಥವಾ 20 ಜನ ಅವರು ಮನಸ್ಸು ಮಾಡಿದರೆ ಮಾತ್ರ ಅಲ್ಲಿ 100 ಜನರನ್ನು ಸೇರಿಸಿಕೊಳ್ಳಬಹುದು. ಸ್ಲಮ್ ದಾದಾ ಎಂದು ಅವರನ್ನು ಅನ್ನಬಹುದು. ಅವರು ಮನಸ್ಸು ಮಾಡಿದರೆ ಮಾತ್ರ, ಬೇರೆಯವರು ಅಲ್ಲ. ಬಹುಶಃ ಚುನಾವಣಾ ವಿಷಯಕ್ಕಾಗಿ ಆ ಸ್ಲಮ್‌ಗಳನ್ನು ಡೆವಲಪ್ ಮಾಡಿಲ್ಲ. ಮಾನ್ಯ ಖಮರುಲ್ ಇಸ್ಲಾಮಾರವರು ಮತ್ತು ನಾವು ನಮ್ಮ ಬಸವನಗುಡಿ ಕ್ಷೇತ್ರದಲ್ಲಿ 2-3 ಕಡೆಗೆ ಹೋಗಿದ್ದೆವು. ಅದು ಸುಮಾರು 20 ವರ್ಷದ ಹಿಂದೆ ಕಟ್ಟಿರತಕ್ಕಂಥ ಸ್ಲಮ್. dilapidated condition ನಲ್ಲಿದೆ. ಅಲ್ಲಿ ಮನೆಗಳೆಲ್ಲಾ ಯಾವತ್ತು ಬಿದ್ದು ಹೋಗಿತ್ತವೋ ಏನೋ. ಅಲ್ಲಿ ಸ್ಲಮ್ ಬೋರ್ಡ್‌ನವರೇ ಮೇಂಟೇನ್ ಮಾಡುತ್ತಿದ್ದಾರೆ. ಅಲ್ಲಿ ಮೇಂಟೇನೆನ್ಸೇ ಇಲ್ಲ. ಪಾರ್ವತೀಪುರಂನಲ್ಲಿ ಮತ್ತು ವಿಶ್ವೇಶ್ವಪುರಂನಲ್ಲಿ ನೋಡಿ, ಅಲ್ಲಿ ಎಲ್ಲರೂ ಬಂದು ಹೇಳಿದರು, ನೋಡಿ ಯಾವತ್ತೋ ಇವೆಲ್ಲಾ ಬಿದ್ದು ಹೋಗುತ್ತವೆ, ದಯವಿಟ್ಟು ಏನಾದರೂ ಸಹಾಯ ಮಾಡಬೇಕು, ಇದನ್ನು ರಿಪೇರಿ ಮಾಡಬೇಕು ಎಂದು. ಇದುವರೆಗೂ ಅವರು ಆರ್ಡರ್ ಮಾಡಿದ್ದರೂ ಇದರ ಕಾರ್ಯಕ್ರಮ ಆಗಲಿಲ್ಲ.

ಅಧ್ಯಕ್ಷರು:- ಮಾನ್ಯ ಸುಬ್ಬಾರೆಡ್ಡಿಯವರೇ, ನಿಮ್ಮ ಎರಡು ನಿಮಿಷದ ಕಾಲಾವಕಾಶ ಮುಗಿದು ಹೋಯಿತು. ಈಗಾಗಲೇ ನಾಲ್ಕು ನಿಮಿಷವಾಯಿತು. ಕೊನೆಯದಾಗಿ ಒಂದು ನಿಮಿಷ ಮಾತ್ರ ಮಾನ್ಯ ಗುರುಸ್ವಾಮಿಯವರು ಮಾತನಾಡಿ.

ಶ್ರೀ ಎನ್. ಸಂಪಗಿ:- ತಾವು ಅಡ್ವೋಕೇಟ್ ಮಾಡಿ ಮಾಡಿ ಕೊನೆಗೂ ಜೀರೋ ಅವರನ್ನೇ ನಮಗೆ ಇಲ್ಲದಂತೆ ಮಾಡುತ್ತೀರಿ. ನಮಗೆ ಇವತ್ತು ಬಹಳ ಇಂಪಾರ್ಟೆಂಟ್ ವಿಷಯ ಪ್ರಸ್ತಾಪಿಸುವುದಿದೆ.

ಅಧ್ಯಕ್ಷರು:- ಮಾನ್ಯ ಗುರುಸ್ವಾಮಿಯವರೇ, ಒಂದು ನಿಮಿಷ ಮಾತ್ರ ಮಾತನಾಡಿ.

ಶ್ರೀ ಎ.ಎಸ್. ಗುರುಸ್ವಾಮಿ(ಚಾಮುಂಡೇಶ್ವರಿ):- ಸನ್ಮಾನ್ಯ ಅಧ್ಯಕ್ಷರೇ, ನನ್ನ ಎಲ್ಲಾ ಹಿರಿಯ ಅನುಭವಿ ಶಾಸಕರೆಲ್ಲರೂ ಕೂಡ ಬಹಳ ಚೆನ್ನಾಗಿ ಏನು ಈ ಸ್ಲಮ್ಸ್ ಬಗ್ಗೆ ವಿಚಾರ ಹೇಳಿದ್ದಾರೆ, ಅದರ ಬಗ್ಗೆ ನನಗೂ ಕೂಡ ಮನದಟ್ಟಾಗಿದೆ, ನಾನು ಅದನ್ನು ಅರ್ಥ ಮಾಡಿಕೊಂಡಿದ್ದೇನೆ. ಈ ಸ್ಲಮ್ಸ್ ಬಗ್ಗೆ ಏನೊಂದು ತಿದ್ದುಪಡಿಗಳನ್ನು ಈ ಸರ್ಕಾರ ತಂದಿದೆಯೋ ಅದನ್ನು ನಾನು ಸ್ವಾಗತ ಮಾಡುತ್ತೇನೆ. But it is only in spirit. but not in resources ಅದನ್ನು ಮಾನ್ಯ ವಸತಿ ಮಂತ್ರಿಗಳು ಗಮನದಲ್ಲಿಟ್ಟುಕೊಳ್ಳಬೇಕು. You have introduced only in spirit, but not in resources. ಅದನ್ನು ಗಮನದಲ್ಲಿಟ್ಟುಕೊಂಡು ತಾವು ಈ ತಿದ್ದುಪಡಿಯನ್ನು ಜಾರಿಗೆ ತರುವಂತಾದ್ದು ಮಾಡಬೇಕು. ನಾನು ಇದನ್ನು ಸ್ವಾತಗ ಮಾಡುತ್ತೇನೆ. ಇದರಲ್ಲಿ ಎರಡನೇ ಮಾತಿಲ್ಲ. ಬಹಳ ಒಳ್ಳೆಯ ಉದ್ದೇಶದಿಂದ ತಂದಿರತಕ್ಕಂಥ ತಿದ್ದುಪಡಿ ಇದಾಗಿದೆ.

ಅಧ್ಯಕ್ಷರು:- ಸ್ವಾಗತ ಮಾಡಿದ ಮೇಲೆ ಮುಗಿಯಿತಲ್ಲಾ, ಇನ್ನು ಮಾತನಾಡುವುದು ಏಕೆ?

4.40 ಪಿ.ಎಂ

ಶ್ರೀ ಎ.ಎಸ್. ಗುರುಸ್ವಾಮಿ:- ಅಕಾಡೆಮಿಕ್ ಆಗಿ ಕೆಲವು ವಿಷಯಗಳನ್ನು ಮಾನ್ಯ ವಸತಿ ಸಚಿವರ ಗಮನಕ್ಕೆ ತರುತ್ತೇನೆ. ಏನೆಂದರೆ, ಮಾನ್ಯಮಂತ್ರಿಗಳು ಸ್ಲಂ ಎನ್ನುವುದರ ಬಗ್ಗೆ

ಡೆಫನೇಷನ್ ಹೇಗೆ ತಿದುಕೊಂಡಿದ್ದಾರೋ ನನಗೆ ಗೊತ್ತಿಲ್ಲ. ಹೈಕೋರ್ಟ್ ಡಿಸಿಷನ್ಸ್ ಬಂದಿರುವ ಕಡೆ ಡೆಫನೆಷನ್ಸ್ ಕೊಟ್ಟಿರುವುದು ಬೇರೆ. ಸ್ಲಂ ಬೋರ್ಡ್ ಅಧಿಕಾರಿಗಳಿಗೆ ಸರ್ಕಾರದಿಂದ ಒಂದು ಸರ್ಕ್ಯುಲರ್ ಹೋಗಿದೆ. ಎಲ್ಲಿ ಬಿಲೋ ಪಾವರ್ಟಿ ಲೈನ್ ಕೆಳಗಡೆ ಜನ ವಾಸ ಮಾಡುತ್ತಾ ಇದ್ದಾರೆ ಅವೆಲ್ಲಾವನ್ನು ಸ್ಲಂ ಎಂದು ಡಿಕ್ಲೇರ್ ಮಾಡಬೇಕೆಂದು ಸರ್ಕ್ಯುಲರ್ ಹೋಗಿದೆ. ನನ್ನ ಚಾಮುಂಡೇಶ್ವರಿ ಕ್ಷೇತ್ರ ಏನಿದೆ ಇದು ಮೈಸೂರು ನಗರದ ಸುತ್ತ ಬರತಕ್ಕಂತಹ ಕ್ಷೇತ್ರ. ಉತ್ತರ ಹಳ್ಳಿ ಕ್ಷೇತ್ರ ಹೇಗೆ ಬರುತ್ತದೆ ಹಾಗೆ ನನ್ನದೂ ಬರುತ್ತದೆ. ಸೂಮಾರು 29 ಸ್ಲಮ್‌ಗಳು ಅನ್‌ಅಥರೈಸ್ಡ್ ರೆವಿನ್ಯೂ ಸೆಟ್ಲ್ ಮೆಂಟ್‌ಗಳು ಇವೆಲ್ಲಾ ಹೆಚ್ಚು ಕಡಿಮೆ ಸ್ಲಂ ಎಂದು ತಿಳಿದುಕೊಳ್ಳುವ ಮಟ್ಟಕ್ಕೆ ಬಂದು ಕುಳಿತಿವೆ. ನಾನು 29 ಸ್ಲಂಗಳನ್ನು ರೆಗ್ಯುಲರೈಸ್ ಮಾಡಿ ಎಂದು ಸ್ಲಂ ಬೋರ್ಡ್ ಛೇರ್ಮನ್‌ಗೆ ಕಾಗದ ಬರೆದೆ, ಬೆಳಿಗ್ಗೆ ಎದ್ದು ನೋಡಿದರೆ ಅವರ ಸ್ಥಿತಿಗತಿಗಳು ಚೆನ್ನಾಗಿಲ್ಲ ಏನಾದರೂ ಮಾಡಿ ರೆಗ್ಯೂಲರೈಸ್ ಮಾಡಿ ಎಂದು ಹೇಳಿದೆ. ಇಲ್ಲ ಗುರುಸ್ವಾಮಿಯವರೇ, ಅದು ಎಲ್ಲವನ್ನು ಸ್ಲಂಗಳು ಎಂದು ಹೇಳುವುದಕ್ಕೆ ಬರುವುದಿಲ್ಲ ಆದರೆ ಒಂದು ಸರ್ಕ್ಯುಲರ್ ಇದೆ. ಆ ಸರ್ಕ್ಯುಲರ್ ಪ್ರಕಾರ ಪಾವರ್ಟಿ ಲೈನ್‌ನಲ್ಲಿ ವಾಸ ಮಾಡತಕ್ಕಂತಹ ಜನ ಎಲ್ಲಿ ವಾಸ ಮಾಡುತ್ತಾರೆ ಅದು ಎಲ್ಲವನ್ನು ಸ್ಲಂ ಎಂದು ಕನ್‌ಸಿಡರ್ ಮಾಡುವುದಕ್ಕೆ ಸರ್ಕಾರ ಯೋಚನೆ ಮಾಡುತ್ತಿದೆ ಎಂಬ ವಿಚಾರ ಹೇಳಿದ್ದಾರೆ. ಇದು ನಿಜವಾಗಿಯೂ ನಿಜವೇ ಅಲ್ಲವೇ ಎನ್ನುವ ಮಾತನ್ನು ದಯಮಾಡಿ ತಾವು ಕ್ಲ್ಯಾರಿಫೈ ಮಾಡಬೇಕು ಇದು ಒಂದು. ಎರಡನೆಯದು ಎಲ್ಲಿಯವರೆಗೆ ನಾವು ಈ ಸಿಟಿ ಮತ್ತು ನಗರದ ತಾರತಮ್ಯ ಇನ್‌ಕಮ್‌ನಲ್ಲಿ, ಬೆಳವಣಿಗೆಯಲ್ಲಿ ಮತ್ತು ಅವಶ್ಯಕತೆಯಲ್ಲಿ ಅಥವಾ ನಾಗರೀಕತೆ ದೃಷ್ಟಿಯಿಂದ ವ್ಯತ್ಯಾಸ ಇರುತ್ತದೆ ಅಲ್ಲಿಯವರೆಗೆ ನಿರಂತರವಾಗಿ ಸ್ಲಂಗಳು ಬೆಳೆಯುತ್ತಿರುತ್ತವೆ ಅದನ್ನು ಪೋಷಣೆ ಮಾಡತಕ್ಕಂತಹ ಜನ ಇದ್ದೇ ಇರುತ್ತಾರೆ. ಪೊಲಿಟಿಕಲ್ ಆಗಿ ಬೆನಿಫಿಟ್ ಮಾಡಿಕೊಳ್ಳತಕ್ಕಂತಹ ಜನ ಇದ್ದಾರೆ. ಇದನ್ನು ರೀಪ್ ಮಾಡತಕ್ಕಂತಹ ಜನ ಇದ್ದಾರೆ. ಸ್ಲಂಗಳನ್ನು ರಾತ್ರೋ ರಾತ್ರಿ ಹುಟ್ಟು ಹಾಕುತ್ತಾರೆ. ರಾತ್ರೋ ರಾತ್ರಿ ದುಡ್ಡು ಕೊಟ್ಟರೆ ಕ್ಲಿಯರ್ ಮಾಡುತ್ತಾರೆ. ರಾತ್ರೋ ರಾತ್ರಿ ಓಟ್ಟು ಕೊಡಿಸಬೇಕೆಂದರೆ ಓಟು ಕೊಡಿಸುತ್ತಾರೆ. ಅಂತಹ ಪರಿಸ್ಥಿತಿಯಲ್ಲಿ ಸ್ಲಂಗಳು ಸಿಕ್ಕಿ ಹಾಕಿಕೊಂಡಿವೆ ಎನ್ನುವುದನ್ನು ನಾವೆಲ್ಲರೂ ಮರೆಯಬಾರದು. ಇದನ್ನು ಕ್ಲಿಯರ್ ಮಾಡಬೇಕಾದರೆ ಏನು ಮಾಡಬೇಕೆಂಬ ಪ್ರಶ್ನೆ ನಮ್ಮ ಮುಂದೆ ನಿಲ್ಲುತ್ತದೆ. ದಯಮಾಡಿ ಈ ಬಗ್ಗೆ ತಾವು ಯೋಚನೆ ಮಾಡುವುದು ಒಳ್ಳೆಯದು ಎಂದು ಹೇಳುತ್ತೇನೆ. ಮಾನ್ಯ ವಸತಿ ಮಂತ್ರಿಗಳಲ್ಲಿ ಕೇಳುವುದೇನೆಂದರೆ, ರಿಜಿಸ್ಟ್ರೇಷನ್ ಸಿಸ್ಟಮ್‌ನ್ನು ತಾವು ದಯಮಾಡಿ ಅಲ್ಲಿ ವಾಸ ಮಾಡತಕ್ಕಂಥವರಿಗೆ ಇಂಟ್ರಡ್ಯೂಸ್ ಮಾಡದೇ ಇದ್ದರೆ ಇದು ನಿರಂತರವಾಗಿ ಬೆಳೆಯುತ್ತಿರುತ್ತದೆ. ಇದಕ್ಕೆ ಕೊನೆಯೇ ಇಲ್ಲ. ಇದಕ್ಕೆ ಹಿಂದೆ ಯಾವುದೇ ಲೇಔಟನ್ನು ಯಾವುದೇ ಡೆವಲಪ್‌ಮೆಂಟ್ ಬೋರ್ಡ್‌ನವರು ಮಾಡಬೇಕಾದ ಸಂದರ್ಭದಲ್ಲಿ ಐದು ಪರ್ಸೆಂಟನ್ನು ಸ್ಲಂಗೋಸ್ಕರ ರಿಸರ್ವ್ ಮಾಡಬೇಕೆಂಬ ಕಾನೂನನ್ನು ಶ್ರೀಮಾನ್ ದೇವರಾಜ್ ಅರಸ್‌ರವರು ಇದ್ದ ಕಾಲದಲ್ಲಿ ಮಾಡಿದ್ದರು. ಆದರೆ ಅದನ್ನು ಈಗ ಹೈಕೋರ್ಟ್‌ನವರು ಸ್ಟಕ್ ಡೌನ್ ಮಾಡಿದರು ಇವತ್ತು ಎಲ್ಲಿಯೂ ಕೂಡ ಸ್ಲಂಗಳನ್ನು ಕ್ಲಿಯರ್ ಮಾಡಿ ಒಂದು ಕಾಲೋನಿ ಚೆನ್ನಾಗಿ ಡೆವಲಪ್ ಮೆಂಟ್ ಮಾಡಬೇಕು ಎಂದರೆ, ಐದು ಪರ್ಸೆಂಟ್ ಸೈಟಗಳನ್ನು ರಿಸರ್ವೇಷನ್ ಮಾಡುವುದಕ್ಕೆ ಅವಕಾಶ ಇಲ್ಲ. ಇದರ ಬಗ್ಗೆ ವಸತಿ ಮಂತ್ರಿಗಳು ಅದನ್ನು ಗಮನಕ್ಕೆ ತೆಗೆದುಕೊಂಡು ಹಿಂದೆ ಯಾವುದೇ ಲೇಔಟ್ ಫಾರಂ ಮಾಡುವುದಾಗಲಿ ಐದು ಪರ್ಸೆಂಟ್ ಕಡ್ಡಾಯವಾಗಿ ಜಾಗಗಳನ್ನು

ಸ್ಲಂಗಳಿಗೆ ಇಡುವ ಹಾಗೆ ತಾವು ಮಾಡಬೇಕು. ಇನ್ನೊಂದು ಮಾತು ಹೇಳುವುದಾದರೆ ಮಿನಿಸ್ಟ್ರೀ ಆಫ್ ಹ್ಯೂಮನ್ ರಿಸೋರ್ಸಸ್, ಗವರ್ನಮೆಂಟ್ ಆಫ್ ಇಂಡಿಯಾದಲ್ಲಿ ಒಂದು ಹೆಡ್ ಇದೆ. ಡಿಸ್‌ಪ್ಲೇಸ್ಡ್ ಪರ್ಸನ್ಸ್ ಹೆಡ್‌ನಲ್ಲಿ ಕೋಟಿಗಟ್ಟಲೆ ಹಣ ಇದೆ. ಡಿಸ್‌ಪ್ಲೇಸ್ಡ್ ಪರ್ಸನ್ಸ್ ಎಂದರೆ ಯಾವುದೋ ಕಾರಣಕ್ಕಾಗಿ ಬೇರೆ ಬೇರೆ ಕಾರಣಗಳಿಂದ ಮೈಗ್ರೇಟ್ ಆಗಿರುತ್ತಾರೆ. They are also called as Displaced Persons. ಡಿಸ್ ಪ್ಲೇಸ್ಡ್ ಹೆಡ್‌ನ ಅಡಿಯಲ್ಲಿ ಕೋಟಿ ಗಟ್ಟಲಿ ಹಣ ಇದೆ. ಆ ಹಣವನ್ನು ಇದುವರೆಗೆ ಕರ್ನಾಟಕದಲ್ಲಿ ಬಳಸಿಕೊಂಡಿಲ್ಲ. ಅದನ್ನು ಬಳಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಿದರೆ ಬಹುಶಃ ಎಲ್ಲಾ ಸ್ಲಂಗಳಿಗೆ ಹೆಚ್ಚು ಹಣ ಬರುತ್ತದೆ ಎನ್ನತಕ್ಕಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ ಮತ್ತೊಮ್ಮೆ ಒಂದು ಮಾತು ಹೇಳತ್ತೇನೆ. ಯುನೈಟೆಡ್ ಸ್ಟೇಟ್ಸ್‌ನಲ್ಲಿ ಸ್ಲಂಗಳಿಗೆ Ghettos ಎಂದು ಹೇಳುತ್ತಾರೆ. Ghettos ಎಂದು ಹೇಳಿದರೆ ಬರೀ ನೀಗ್ರೋಸ್ ಇರುವಂಥ ಜಾಗ. ಆ ನೀಗ್ರೋಸ್ ಇರತಕ್ಕಂತಹ ಜಾಗಕ್ಕೆ ನಮ್ಮಲ್ಲಿ ನಾವು ಸ್ಲಂಗಳು ಎಂದು ಹೇಳುತ್ತೇವೆ. ಮಾನ್ಯ ಸಗೀರ್ ಅವರು ಸರ್ಕಾರದ ವತಿಯಿಂದ ಹೋಗಿ ಅಲ್ಲಿ ಸ್ವಲ್ಪ ನೋಡಿಕೊಂಡು ಬರಲಿ ಅವರು ಸ್ಲಂಗಳನ್ನು ಎಷ್ಟು ಎಫೆಕ್ಟೀವ್ ಆಗಿ ಟ್ಯಾಕಲ್ ಮಾಡುತ್ತಾರೆ. ಎಷ್ಟು ಅಬ್ಜೆಕ್ಟೀವ್ ಆಗಿ ಟ್ಯಾಕಲ್ ಮಾಡುತ್ತಾರೆ ಎನ್ನುವುದನ್ನು ನಾವು ನೋಡಬಹುದು. ಬರೀ ದುಡ್ಡು ಬೇಕೆಂದು ಹೇಳುವ ಮಾತಿಲ್ಲ. ಏನೋ ಕಮಿಟ್‌ಮೆಂಟ್‌ನಿಂದ ಮಾಡಬೇಕಾದ ಕೆಲಸ ಆ Ghettos ಅನ್ನು ಯಾವ ರೀತಿ ಯು.ಎಸ್.ಎ.ನಲ್ಲಿ ಟ್ಯಾಕಲ್ ಮಾಡಿದ್ದಾರೆ ಆ ದೃಷ್ಟಿಯಲ್ಲಿ ತಾವು ಇಲ್ಲಿ ಸ್ಲಂ ಕ್ಲಿಯರೆನ್ಸ್ ಮಾಡಿದರೆ ಬಹಳ ಒಳ್ಳೆಯದು. ಮುಂದೆ ಇಂತಹವು ಬರುವುದಿಲ್ಲ ಎನ್ನುವ ಮಾತನ್ನು ಹೇಳುತ್ತಾ, ಈ ತಿದ್ದುಪಡಿಯನ್ನು ಸ್ವಾಗತ ಮಾಡಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದನೆಗಳನ್ನು ಸಲ್ಲಿಸುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ (ವಸತಿ ಸಚಿವರು):- ಸನ್ಮಾನ್ಯ ಸಭಾಧ್ಯಕ್ಷರೆ, ಇವತ್ತು ಈ ಕೊಳಚೆ ನಿರ್ಮೂಲನಾ ಮಂಡಳಿಗೆ ಕೆಲವು ತಿದ್ದುಪಡಿಗಳನ್ನು ತಂದಿರುವ ಸಂದರ್ಭದಲ್ಲಿ ವಿರೋಧ ಪಕ್ಷದ ನಾಯಕರು ಕೆಲವು ಸಲಹೆಗಳನ್ನು ಮತ್ತು ಕೊಳಚೆ ನಿರ್ಮೂಲನ ಮಂಡಳಿಯ ಅಭಿವೃದ್ಧಿ ಬಗ್ಗೆ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಒಟ್ಟಾರೆ ಇಲ್ಲಿಯವರೆಗೆ ಕೊಳಚೆ ನಿರ್ಮೂಲನಾ ಮಂಡಳಿಯವರು ಗುರುತಿಸಿರತಕ್ಕಂತಹ ಕೊಳಚೆ ಪ್ರದೇಶಗಳ ಸಂಖ್ಯೆ 2,385 ಇದರಲ್ಲಿ ಘೋಷಿತ ಕೊಳಚೆ ಪ್ರದೇಶಗಳು 1804 ಬೆಂಗಳೂರು ನಗರದಲ್ಲಿ 289, 2385 ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿರತಕ್ಕಂತಹ ಕೊಳಚೆ ಪ್ರದೇಶದ ನಿವಾಸಿಗಳ ಸಂಖ್ಯೆ ರಾಜ್ಯಾದ್ಯಂತ 24 ಲಕ್ಷ. ಸನ್ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯ ಸರ್ಕಾರ ಈ ಎರಡೂವರೆ ವರ್ಷಗಳಲ್ಲಿ ಎಷ್ಟು ಹಣವನ್ನು ಖರ್ಚು ಮಾಡಿದೆ, ಈ ಹಿಂದೆ ವರ್ಷಕ್ಕೊಮ್ಮೆ ಕೊಳಚೆ ಪ್ರದೇಶಗಳಿಗೆ ಸ್ವಲ್ಪ ಹಣವನ್ನು ಒದಗಿಸಿಕೊಡುತ್ತಿದ್ದರು ಎನ್ನುವ ವಿಚಾರವನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಇವತ್ತು ನಮ್ಮ ಮುಂದೆ ಇಟ್ಟಿದ್ದಾರೆ. ಈ ಬಜೆಟ್‌ನ ಮೊದಲನೇ ವರ್ಷದಲ್ಲಿ 279 ಸ್ಲಂಗಳಲ್ಲಿ 21 ನಗರಗಳನ್ನು ನಾವು ನಮ್ಮ ಏನು ನಮ್ಮ ನಿರ್ಮಲ ಜ್ಯೋತಿ ಯೋಜನೆ ಅಡಿಯಲ್ಲಿ ಗುರುತಿಸಿದ್ದೇವೆ ಇದಕ್ಕೆ ಈ ವರ್ಷದಲ್ಲಿ ನಾವು 64 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡುವುದರ ಬಗ್ಗೆ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಇದು ಗುರುತಿಸಿರುವ 21 ನಗರ ಪ್ರದೇಶಗಳು. ಈಗಾಗಲೇ ನಾವು 9 ನಗರ ಪ್ರದೇಶಗಳಲ್ಲಿ 30 ಕೋಟಿರೂಪಾಯಿಗಳ ವೆಚ್ಚದಲ್ಲಿ ಕೆಲಸಗಳನ್ನು ಟೆಂಡರ್ ಮುಖಾಂತರ ತೆಗೆದುಕೊಳ್ಳುವುದಕ್ಕಾಗಿ ಟೆಂಡರ್ ಕರೆದಿದ್ದೇವೆ. ಇನ್ನು ಉಳಿದದ್ದು ಸ್ಟೀರಿಂಗ್

ಕಮಿಟಿ ಎಂದು ಒಂದು ಸಮಿತಿ ಏನು ಮಾಡಿದ್ದೇವೆ. ಆ ಸಮಿತಿ ಮುಂದೆ ಇದೆ. ಆ ಸಮಿತಿ ತನ್ನ ತೀರ್ಮಾನ ತೆಗೆದುಕೊಂಡ ತಕ್ಷಣ ಉಳಿದಂತಹ ಕೊಳಚೆ ಪ್ರದೇಶದ ಅಭಿವೃದ್ಧಿಗೆ ನಿರ್ಮಲ ಜ್ಯೋತಿ ಅಡಿಯಲ್ಲಿ ನಮ್ಮ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಮುಂದಾಗಿದ್ದೇವೆ. ಮುಖ್ಯವಾದ ವಿಚಾರವೇನೆಂದರೆ, ಕೆಲವು ಸಲಹೆಗಳನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಕೊಟ್ಟಿದ್ದಾರೆ. ಮಹದೇವ ಜವಳಿ ಗಿರಣಿ ವಿಚಾರವನ್ನು ತಾವು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡಿದ್ದೀರಿ. ಅಲ್ಲಿ ವಾಸಿಸುತ್ತಿರುವ ಜನರಿಗೆ ಪರಿಹಾರ ನೀಡಬೇಕೆಂದು ಅಡಿಷನಲ್ ಲಾ ಸೆಕ್ರೆಟರಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ರಚನೆ ಮಾಡಿದ್ದೇವೆ. ಈ ಸಮಿತಿಯ ನಡವಳಿಕೆಗಳು ಮುಂದುವರಿಯುತ್ತಿವೆ. ಅದರ ಮಾಹಿತಿ, ವರದಿ ಬಂದ ನಂತರ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇವೆಂದು ಹೇಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್:- ಮಹದೇವ ಜವಳಿ ಗಿರಣಿ ಕಾರ್ಮಿಕರಿಗೆ ಪರಿಹಾರಧನ ಕೊಡುತ್ತಿದ್ದಾರೆ. ನಾಲ್ಕೈದು ಜನರಿಗೆ ಕೊಟ್ಟಿದ್ದಾರೆ. ಇನ್ನು 75 ರಿಂದ 100 ಜನರಿಗೆ ಪರಿಹಾರ ಕೊಟ್ಟಿಲ್ಲ. ಗಿರಣಿ ಚಾಳ ಏನಿದೆ ಅದು ಮಹದೇವ ಜವಳಿ ಗಿರಣಿ ಆಸ್ತಿ ಆದು ಗವರ್ನಮೆಂಟ್ ಲ್ಯಾಂಡ್ ಅದರಲ್ಲಿ ಗುಡಿಸಲು ಹಾಕಿಕೊಂಡು 100 ವರ್ಷವಾಗಿದೆ. ಅಲ್ಲಿ ಆ ಜಾಗ ವೆಕೇಟ್ ಮಾಡಿದರೆ ಮಾತ್ರ ಪರಿಹಾರಧನ ಕೊಡುತ್ತೇವೆಂದು ಹೇಳುತ್ತಾರೆ. ಅದು ಸ್ಲಂ ಎಂದು ಸ್ಲಂ ಬೋರ್ಡ್‌ನಿಂದ ಡಿಕ್ಲೇರ್ ಆಗಿದೆ. ನೀವು ಸ್ಲಂ ಇಂಪ್ರೂವ್‌ಮೆಂಟ್ ಸಲುವಾಗಿ ಹಣ ಕೊಟ್ಟಿದ್ದೀರಿ. ನಿಮ್ಮ ಅಧೀನದಲ್ಲಿ ಇದ್ದುದ್ದಕ್ಕೆ ಅದನ್ನು ವೆಕೇಟ್ ಮಾಡಿದರೆ ಪರಿಹಾರಧನ ಕೊಡುತ್ತೇವೆಂದು ಜವಳಿ ಗಿರಣಿಯವರು ಕ್ವೈಯರಿ ಹಾಕುತ್ತಿದ್ದಾರೆ. ನೀವು ನಿಮ್ಮ ರೈಟ್ ಎಸ್ಟಾಬ್ಲಿಷ್ ಮಾಡಿ ಅವರಿಗೆ ಪ್ರೊಟೆಕ್ಷನ್ ಕೊಡಬೇಕಾಗಿದೆ. ಇನ್ನು 75 ರಿಂದ 100 ಜನರು ಗುಡಿಸಲುಗಳನ್ನು ಹಾಕಿದ್ದಾರೆ. ಸ್ಲಂ ಎಂದು ಡಿಕ್ಲೇರ್ ಮಾಡಿ ನೀವು ಏನು ಇಂಪ್ರೂವ್‌ಮೆಂಟ್ ಮಾಡಿದ್ದೀರಲ್ಲಾ ಅವರಿಗೆ ಹಕ್ಕುಪತ್ರ ಕೊಟ್ಟು ಅವರಿಗೆ ನೀವು ಪ್ರೊಟೆಕ್ಷನ್ ಕೊಡಬೇಕಾಗಿದೆ.

ಶ್ರೀ ಸಿ.ಆರ್. ಸಗೀರ್ ಅಹಮದ್:- ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ತಕ್ಷಣವೇ ಅದರ ಮೇಲೆ ಗಮನ ಕೊಡುವುದರ ಮುಖಾಂತರ ಪರಿಶೀಲಿಸುತ್ತೇನೆ. ತಕ್ಷಣ ಮಾಹಿತಿ ಬೇಕೆಂದರೆ ತನ್ನ ಹತ್ತಿರ ಇಲ್ಲ, ಮಾನ್ಯ ವಿರೋಧ ಪಕ್ಷದ ನಾಯಕರು ಮಧ್ಯವರ್ತಿಗಳ ಹಾವಳಿ ಬಗ್ಗೆ ಹೇಳಿದರು. ಇದು ತಮಗೆ ಗೊತ್ತಿದೆ. ಹೊಸ ಕೊಳಚೆ ಪ್ರದೇಶಗಳನ್ನು ನಿರ್ಮಾಣ ಮಾಡಬಾರದು, ಇದರಲ್ಲಿ ಎಲ್ಲರ ಸಹಕಾರ ಅಗತ್ಯ. ಕೇವಲ ಸರ್ಕಾರ ಮುಂದಾಗಿ ನಾವು ಇದನ್ನು ನಿಲ್ಲಿಸುತ್ತೇವೆ ಎನ್ನುವ ವಿಚಾರ ಸರಿಯಲ್ಲ. ತಾವು ಎಷ್ಟು ಆಸಕ್ತಿಯಿಂದ ಹೇಳುತ್ತೀರಿ, ಸರ್ಕಾರಕ್ಕೂ ಅಷ್ಟೇ ಆಸಕ್ತಿ ಇದೆ. ಯಾವುದೇ ಕಾರಣಕ್ಕೆ ಕೊಳಚೆ ಪ್ರದೇಶಗಳು ಈ ರಾಜ್ಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ತಲೆ ಎತ್ತಬಾರದು. ಇದು ತಲೆ ಎತ್ತುವುದಕ್ಕೆ ಕಾರಣಕರ್ತರು ಯಾರು ಎಂಬುದು ತಮಗೆ ನಮಗೆ ತಿಳಿದಿರುವ ವಿಚಾರ. ಆದರೆ ಇದಕ್ಕೆ ಪ್ರೋತ್ಸಾಹ ಕೊಡುವುದರ ಬಗ್ಗೆ ಕಡಿವಾಣ ಹಾಕಬೇಕು. ತಡೆಹಿಡಿಯಬೇಕು. ಇದನ್ನು ಇದಕ್ಕೆ ಎಲ್ಲರ ಸಹಕಾರ ಸರ್ಕಾರಕ್ಕೆ ಅಗತ್ಯ. ಮಾನ್ಯ ವಿರೋಧ ಪಕ್ಷದ ನಾಯಕರು ಹೊಸದಾಗಿ ಸ್ಲಂಗಳು ಬರುವುದರ ಬಗ್ಗೆ ತಡೆ ಹಿಡಯಬೇಕೆಂದು ಸಲಹೆ ಕೊಟ್ಟಿದ್ದಾರೆ. ಅದರ ಬಗ್ಗೆ ಗಮನ ಕೊಡುವುದರ ಮುಖಾಂತರ ತಮ್ಮ ಸಹಕಾರವೂ ಸಹ ಇದಕ್ಕೆ ಅಗತ್ಯವಾಗಿ ಬೇಕಾಗುತ್ತದೆ ಎಂದು ತಮಗೆ ತಿಳಿಸುತ್ತೇನೆ. ಮಾನ್ಯ ರಾಮದಾಸ್‌ರವರು ಕೆಲ ವಿಚಾರಗಳನ್ನು ಪ್ರಸ್ತಾಪಿಸಿ ಸೆಕ್ಷನ್

27(3)ಕ್ಕೆ ತಿದ್ದುಪಡಿ ತಂದಿರುವುದು ನಾವು ಕೊಡುವುದು, ನೇರವಾಗಿ ಅವರ ಹೆಸರಿಗೆ ಖರೀದಿಗೆ ಕೊಡುವುದು, ಗುತ್ತಿಗೆ ಮೇಲೆ ನೀಡುವ ಮನೆಗಳ ಮೇಲೆ ನೀವು ಪಿಪಿ ಆಕ್ಟ್‌ನ್ನು ಜಾರಿಗೆ ತರುತ್ತಿದ್ದೀರಿ ಎಂದು ಹೇಳಿದ್ದಾರೆ. ಕೇಂದ್ರ ಸರ್ಕಾರ ಶೇಕಡ 50 ರಷ್ಟು ಸಹಾಯ ಧನ ನೀಡುವುದರ ಮುಖಾಂತರ ಶೇಕಡ 50 ರಷ್ಟು ಹಣಕ್ಕೆ ಕರ್ನಾಟಕ ರಾಜ್ಯ ಸರ್ಕಾರ ಗ್ಯಾರಂಟಿ ಕೊಡುವುದರ ಮುಖಾಂತರ ಮರುಪಾವತಿ ಮಾಡುವಂಥ ಸಂದರ್ಭದಲ್ಲಿ ವಿಳಂಬ ಆಗಾದೆ ಅಥವಾ ಮರುಪಾವತಿ ಮಾಡುವುದರ ಬಗ್ಗೆ ನಮ್ಮ ಫಲಾನುಭವಿಗಳು ಮಾಡದೇ ಇದ್ದಾಗ ಹೇಗೆ ಅವರಿಂದ ಹಣ ವಸೂಲಾತಿ ಮಾಡಬೇಕು ಎನ್ನುವುದಕ್ಕೆ ಈ 27(3)ರಲ್ಲಿ ತಿದ್ದುಪಡಿ ಏನು ತಂದಿದ್ದೇವೆ ಆ ಮೂಲಕ ಮನೆಯನ್ನು ಖಾಲಿ ಮಾಡಬೇಕಾಗುತ್ತದೆ ಎನ್ನುವ ಭಯವಾದರೂ ಆ ಫಲಾನುಭವಿಗಳಿಗಿರಲಿ ಎನ್ನುವ ಉದ್ದೇಶದಿಂದ ಈ ಪಿ.ಪಿ. ಆ್ಯಕ್ಟ್‌ನ್ನು ತರುವುದರ ಮುಖಾಂತರ ಹೇಳುತ್ತಿದ್ದೇವೆ. ಏಕೆ ಎಂದು ಹೇಳಿದರೆ ಸರ್ಕಾರ ಗ್ಯಾರಂಟಿ ಕೊಟ್ಟು ಪಡೆದಿರುವಂಥ ಸಾಲದ ಹಣ ಫಲಾನುಭವಿಗಳೇ ಮರುಪಾವತಿ ಮಾಡಬೇಕೇ ವಿನಃ ಸರ್ಕಾರಕ್ಕೆ ಯಾವುದೇ ಒಂದು ಹತೋಟಿ ಇರಬೇಕು ಎನ್ನುವ ಉದ್ದೇಶದಿಂದ ಈ ಒಂದು ಕಾನೂನನ್ನು ಅಸ್ತಿತ್ವಕ್ಕೆ ತಂದಿದ್ದೇವೆ. ಇದರಿಂದ ಮತ್ತೊಂದೇನು ಎಂದರೆ ನಾವು ಗುತ್ತಿಗೆಯನ್ನು ಕೊಡುವಂಥ ಸಂದರ್ಭದಲ್ಲಿ ಅಥವಾ ಅವರ ಹೆಸರಿಗೆ ಈ ಮನೆಯನ್ನು ಮಾಡಿಕೊಡುವಂಥ ಸಂದರ್ಭದಲ್ಲಿ ಮಾನ್ಯ ಸಿಂಧ್ಯಾಜಿಯವರು ಮತ್ತು ಮಾನ್ಯ ಬಚ್ಚೇಗೌಡರು ಹೇಳಿದ ಹಾಗೆ ಈಗ ಒಬ್ಬ ಮನೆಯ ಮಾಲಿಕತ್ವ ಹೊಂದಿರುವಂಥ ಒಬ್ಬ ವ್ಯಕ್ತಿಗೆ ನಾವು ಈ ಒಂದು ಹಕ್ಕುಪತ್ರ ನೀಡುವಂಥ ಸಂದರ್ಭದಲ್ಲಿ ಹದಿನೈದು ವರ್ಷಗಳ ಕಾಲ ಈ ಮನೆಯನ್ನು ಪರಭಾರೆ ಮಾಡಕೂಡದು ಎನ್ನುವ ಒಂದು ನಿಬಂಧನೆಯೊಂದಿಗೆ ಅವರಿಗೆ ಹಕ್ಕುಪತ್ರ ಕೊಡುವುದರ ಮುಖಾಂತರ ತಿಂಗಳಿಗೆ 300 ರೂಪಾಯಿಗಳನ್ನು ಮರುಪಾವತಿ ಮಾಡುವಂತೆ ಒಟ್ಟಾರೆ ಹದಿನೈದು ವರ್ಷಗಳ ಕಾಲಕ್ಕೆ ಈ ಕಾಯಿದೆಯನ್ನು ನಾವು ಅಸ್ತಿತ್ವಕ್ಕೆ ತರುವಂಥದ್ದು ಎಂದು ನಾವು ತೀರ್ಮಾನ ಮಾಡಿದ್ದೇವೆ. ಇದರ ಜೊತೆಗೆ ಮಾನ್ಯ ಸಿಂಧ್ಯಾಜಿಯವರು ಎರಡೂರು ವಿಚಾರಗಳನ್ನು ನನ್ನ ಗಮನಕ್ಕೆ ತಂದಿದ್ದಾರೆ. ಈಗ ಕಾಂಗ್ರೆಸ್ ಪಕ್ಷದ ಮ್ಯಾನಿಫೆಸ್ಟೋವನ್ನು ಒಂದು ಕಡೆ ನಾನು ಓದಿಲ್ಲವೆಂದು ಹೇಳುತ್ತಾರೆ. ಇನ್ನೊಂದು ಕಡೆ ಕಾಂಗ್ರೆಸ್ ಪಕ್ಷದ ಶಿಸ್ತಿನ ಸಿಪಾಯಿ ಸಗೀರ್ ಅಹಮದ್‌ರವರು ಎಂದು ಹೇಳುತ್ತಾರೆ. ಏಕೆಂದರೆ ಅವರ ಮಾತಿಗೆ ಗೌರವಾನೂ ಅಷ್ಟೇ ಇದೆ. ಅವರ ಮಾತಿನಂತೆ ಕೆಲವು ವಿಚಾರಗಳನ್ನು ನಾವು ಅರಿತುಕೊಳ್ಳಬೇಕಾಂಥದ್ದು ಇದೆ ಕಾಂಗ್ರೆಸ್ ಪಕ್ಷದ ಪ್ರಣಾಳಿಕೆಯಲ್ಲಿ ಹೇಳಿರುವಂಥ ಅನೇಕ ವಿಚಾರಗಳನ್ನು ನಾವು ಅಸ್ತಿತ್ವಕ್ಕೆ ತಂದಿದ್ದೇವೆ. ಕೊಳಚಿ ಪ್ರದೇಶದ ಅಭಿವೃದ್ಧಿಗಾಗಿ ಕೂಡ ನಾವು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕ್ಕೊಂಡಿದ್ದೇವೆ. ಅದು ತಮಗೂ ತಿಳಿದಿರುವಂಥ ವಿಚಾರವೇ ಆಗಿದೆ. ಅದು ನಗರಪಾಲಿಕಾ ಚುನಾವಣೆ ನಡೆಯುವಂಥ ಸಂದರ್ಭವೇ ಇರಬಹುದು, ನಗರಸಭೆ, ಪುರಸಭೆಗಳ ಚುನಾವಣೆ ನಡೆಯುವಂಥ ಸಂದರ್ಭಗಳೇ ಇರಬಹುದು. ಇವೊತ್ತು ಕೊಳಚಿ ಪ್ರದೇಶವನ್ನು ಅಭಿವೃದ್ಧಿ ಪಡಿಸುತ್ತೇವೆ ಎನ್ನುವಂಥ ವಿಚಾರವನ್ನು ಘೋಷಣೆ ಮಾಡಿರುವಂಥ ಸಂದರ್ಭದಲ್ಲಿ ಪ್ರಣಾಳಿಕೆಯಲ್ಲಿ ನಾವು ಈ ವಿಚಾರವನ್ನು ಹೇಳಿರುವುದಕ್ಕಾಗಿಯೇ ಇವೊತ್ತು ಹೊಸ ಹೊಸ ಕಾರ್ಯಕ್ರಮಗಳನ್ನು ಅಂದರೆ ನಿರ್ಮಲಜ್ಯೋತಿ, ಬಾಬಾ ಸಾಹೇಬ್ ಅಂಬೇಡ್ಕರ್‌ರವರ ವಾಲ್ಮೀಕಿ ಅಂಬೇಡ್ಕರ್ ಹೆಸರಿನಲ್ಲಿ ಕಾರ್ಯಕ್ರಮ ಇದೆ.

ಶ್ರೀ ಪಿ.ಜಿ. ಆರ್. ಸಿಂಧ್ಯಾ:- ಅವು ಕೇಂದ್ರ ಸರ್ಕಾರದ ಯೋಜನೆಗಳು

ಶ್ರೀ ಸಿ.ಆರ್. ಸಗೀರ್ ಅಹಮದ್:- ಆದರೂ ಕೂಡ ಈ ಯೋಜನೆ ಬಗ್ಗೆ ರಾಜ್ಯ ಸರ್ಕಾರದಿಂದ ಅವರಿಗೆ ತಿಳುವಳಿಕೆ ನೀಡಿ ಕೊಳಚೆ ಪ್ರದೇಶಗಳ ಅಭಿವೃದ್ಧಿ ಮಾಡುವಂಥ ಒಂದು ಕಾರ್ಯಕ್ರಮ ನಮ್ಮ ಮುಂದೆ ಇದೆ ಎನ್ನುವ ವಿಚಾರವನ್ನು ಕೇಂದ್ರ ಸರ್ಕಾರದ ಗಮನಕ್ಕೆ ತಂದಾಗ ಅವರು ಸಹಾಯದ ರೂಪದಲ್ಲಿ ರಾಜ್ಯ ಸರ್ಕಾರಕ್ಕೆ ಶೇಕಡ 50 ರಷ್ಟು ಸಹಾಯ ಧನವನ್ನು ನೀಡುವುದಕ್ಕೆ ಮುಂದೆ ಬಂದಿರುವಂಥ ಈ ಸಂದರ್ಭದಲ್ಲಿ ನಮ್ಮದೂ ಶೇಕಡ 50ರಷ್ಟು ಸಹಾಯದೊಂದಿಗೆ ಈ ಪ್ರದೇಶದ ಅಭಿವೃದ್ಧಿಗೆ ಮತ್ತು ಜನರ ಏಳಿಗೆಗಾಗಿ ಕಾರ್ಯಕ್ರಮವನ್ನು ನಾವು ಹಮ್ಮಿಕೊಂಡಿದ್ದೇವೆ. ನಮ್ಮ ಪ್ರಣಾಳಿಕೆಯಲ್ಲಿ ಹೇಳಿರುವಂಥ ವಿಚಾರದಲ್ಲಿಯೂ ಸಹ ನಾವು ಯಶಸ್ವಿಯಾಗುವಂಥದ್ದು, ನಮ್ಮ ಪ್ರಣಾಳಿಕೆಯಲ್ಲಿ ಹೇಳಿರುವಂಥ ವಿಚಾರದಲ್ಲಿಯೂ ತಮಗೆಲ್ಲರಿಗೂ ತಿಳಿದ ಹಾಗೆ ತಾವು ಪದೇ ಪದೇ ಏನು ಹೇಳುತ್ತಿದ್ದೀರಿ ಎಂದರೆ ಕೇವಲ ಪ್ರಚಾರಕ್ಕಾಗಿ ಕಾರ್ಯಕ್ರಮಗಳನ್ನು ತಾವು ಘೋಷಣೆ ಮಾಡುತ್ತಿದ್ದೀರಿ ಎಂದಿರಿ. ನಿವೇಶನ ರಹಿತ, ಅಥವಾ ವಸತಿ ಹೀನರಿಗೆ ನಾವು 11 ಲಕ್ಷ ಮನೆಗಳನ್ನು ಕಟ್ಟುತ್ತೇವೆ ಎಂದು ಹೇಳಿ ನಾವು ಪದೇ ಪದೇ ಹೇಳುತ್ತಿದ್ದೇವೆ. ನಾವು ಈ ಸದನದಲ್ಲಿ ಕುಳಿತು ನಿಮ್ಮಂಥ ಹಿರಿಯ ಸಚಿವರುಗಳ, ಶಾಸಕರುಗಳ ಅಭಿಪ್ರಾಯದಂತೆ ನಾವು ಇವೊತ್ತು ಇಲ್ಲಿ ನಿಂತು ಮಾತನಾಡುವುದರ ಬಗ್ಗೆ ನಮಗೂ ಅವಕಾಶಗಳು ಸಿಕ್ಕಿರುವಂಥ ಸಂದರ್ಭದಲ್ಲಿ ನಾನು ಮಾನ್ಯ ಸಿಂಧ್ಯಾಜಿಯವರ ಗಮನಕ್ಕೆ ತರುವಂಥದ್ದು ಏನೆಂದರೆ ಆಶ್ರಯ ಯೋಜನೆಯಡಿ ನಾವು 3 ಲಕ್ಷದ 58 ಸಾವಿರ ಮನೆಗಳನ್ನು ಸಂಪೂರ್ಣವಾಗಿ ನಿರ್ಮಿಸಿ ಫಲಾನುಭವಿಗಳ ಸ್ವಾಧೀನಕ್ಕೆ ಕೊಡುವುದರ ಮುಖಾಂತರ ಈ ವರ್ಷದಲ್ಲಿ ಎರಡು ಲಕ್ಷ ಮನೆಗಳನ್ನು ನಿರ್ಮಾಣ ಮಾಡುವುದರ ಬಗ್ಗೆ ಆಗಲೇ ನಾವು ಎಲ್ಲಾ ಗೌರವಾನ್ವಿತ ಶಾಸಕರುಗಳಿಗೆ ಕ್ಷೇತ್ರವಾರು ಮನೆ ಹಂಚಿಕೆಯನ್ನು ಮಾಡಿದ್ದೇವೆ. ಮುಂದಿನ ವರ್ಷ ಮಾರ್ಚ್ 2003ರೊಳಗೆ ನಾವು 5 ಲಕ್ಷ ಮನೆಗಳನ್ನು ಕಟ್ಟುವುದರಲ್ಲಿ ಯಶಸ್ವಿಯಾಗುತ್ತೇವೆ. ಆದುದರಿಂದ ಈ ಬಗ್ಗೆ ಮನೆಗಳನ್ನು ಕಟ್ಟುತ್ತೇವೆ, ಕಟ್ಟುತ್ತೇವೆ ಎಂದು ಕೇವಲ ಪ್ರಚಾರಕ್ಕಾಗಿ ಹೇಳುತ್ತಿಲ್ಲ. ಈ ಸಂದರ್ಭದಲ್ಲಿ ಈ ವಿಚಾರವನ್ನು ಮಾನ್ಯ ಸಿಂಧ್ಯಾಜಿಯವರ ಗಮನಕ್ಕೆ ತರುತ್ತಿದ್ದೇನೆ. ಈಗಾಗಲೇ ಸಿಂಧ್ಯಾಜಿಯವರು ಅನೇಕ ವಿಚಾರಗಳನ್ನು ಹೇಳಿದ್ದಾರೆ. ಸಿಂಧ್ಯಾಜಿಯವರು ಆಯುಕ್ತರ ನೇಮಕ ಅಗತ್ಯವಾಗಿ ಈ ಇಲಾಖೆಗೆ ಬೇಕಾಗಿರುತ್ತೇ ಎಂದು ಕೇಳಿದ್ದಾರೆ. ಈ ಹಿಂದೆ ತಮಗೆ ಗೊತ್ತಿರುವ ಹಾಗೆ ಇಷ್ಟು ಕೊಳಚೆ ಪ್ರದೇಶಗಳು ಇದ್ದರೂ ಸಹ ವ್ಯವಹಾರಿಕವಾಗಿ ಅಧಿಕೃತವಾದ ವಿಚಾರಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಇವೊತ್ತು ನಾನು ತಮ್ಮ ಗಮನಕ್ಕೆ ತಂದಹಾಗೆ 10213 ಮನೆಗಳನ್ನು ನಾವು ಕಟ್ಟುವಂಥ ಸಂದರ್ಭದಲ್ಲಿ ಇದರ ವಸೂಲಾತಿಗಾಗಿ ಕೂಡ ನಾವು ಕೆಲವರನ್ನು ನೇಮಕ ಮಾಡಿಕೊಳ್ಳಬೇಕಾಗುತ್ತದೆ. ಆದರ ಜೊತೆಗೆ ಈಗ ನಡೆಸುವಂಥ ಎಲ್ಲಾ ಅಭಿವೃದ್ಧಿ ವಿಚಾರಗಳಿಗಾಗಿ..

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ನನಗೆ ಗೊತ್ತಿರುವಂತೆ ಮಾನ್ಯ ಅಧ್ಯಕ್ಷರೆ, ನಾನು ಏಕೆ ಇದನ್ನು ಹೇಳಿದೆನೆಂದರೆ, ನಾನು ಏಕೆ ಚುಚ್ಚು ಮಾತನ್ನು ಈ ವಿಚಾರದಲ್ಲಿ ಹೇಳಿದೆನೆಂದರೆ ಈ ಒಬ್ಬ ಅಸಿಸ್ಟೆಂಟ್ ಕಮಿಶನರ್ ಗ್ರೇಡ್‌ನಲ್ಲಿ ಅಧಿಕಾರಿಗಳು ಒಬ್ಬರು ಅಲ್ಲಿ ಸಕ್ರೆಟರಿ ಎಂದು ಇದ್ದಾರೆ. ಈಗ ನೀವು ಕಮಿಶನರ್ ಎಂದು ಹೇಳಿಬಿಟ್ಟು ಗ್ಲೋರಿಫೈ ಮಾಡುತ್ತಾ ಇದ್ದೀರಿ. ಒಂದು ಕಡೆ ಹೇಳುತ್ತೀರಿ, ನಾರು ಡಿವಿಶನಲ್ ಕಮಿಶನರ್ ಪೋಸ್ಟ್‌ಗಳನ್ನೆಲ್ಲಾ ಅಬಾಲಿಶ್ ಮಾಡುತ್ತೇವೆ. ನಿಮ್ಮ ಮುಖ್ಯಮಂತ್ರಿಗಳು ಹೇಳುತ್ತಾರೆ. ಡೆಲ್ಲಿಯಿಂದ ಬರುವ ಅಧಿಕಾರಿಗಳ ಮೇಲೆ ಕಡಿವಾಣ

ಹಾಕುತ್ತೇವೆ. ವೆಚ್ಚ ಕಡಿಮೆ ಮಾಡುತ್ತೇವೆ ಎಂದು ಹೇಳುತ್ತಾರೆ. ಈಗ ನೀವೇ ಮಾಡುತ್ತಾ ಇರ್ತೀರಾ ನೋಡಿ, ಮೂರು ತಿಂಗಳಲ್ಲಿ ಅಲ್ಲಿರುವ ಸೆಕ್ರೆಟರಿಯನ್ನು ಕಿತ್ತು ಹಾಕಿ ಒಬ್ಬ ಐ.ಎ.ಎಸ್. ಅಫೀಸರ್‌ನ್ನು ಅಲ್ಲಿ ಹಾಕುತ್ತೀರಿ. ಹಾರ್‍ನಳ್ಳಿ ರಾಮಸ್ವಾಮಿಯವರ ಕಮಿಶನ್ ರಿಪೋರ್ಟ್ ಏನಿದೆ ಅದರಲ್ಲಿ ಏನು ಹೇಳಲಾಗಿದೆ ಅದನ್ನು ಜಾರಿ ಮಾಡುತ್ತೇವೆ ಎಂದು ಭಾಷಣ ಮಾಡುತ್ತೀರಿ. ಹೇಗಾಗುತ್ತದೆ ಒಂದಕ್ಕೊಂದು ವಿರುದ್ಧ ಅಲ್ಲವೇ?

ಶ್ರೀ ಸಿ.ಆರ್. ಸಗೀರ್ ಅಹಮದ್:- ಮಾನ್ಯ ಅಧ್ಯಕ್ಷರೆ, ಕೊಳಚೆ ಪ್ರದೇಶ ಅಭಿವೃದ್ಧಿ ಮಂಡಳಿಯಲ್ಲಿ ಆಯುಕ್ತರ ಅಗತ್ಯತೆ ಏಕೆ ಎಂದು ಹೇಳಿದರೆ ಈಗ ವ್ಯವಹಾರಿಕವಾಗಿ 24 ಲಕ್ಷ ಜನರು ಈ ರಾಜ್ಯದಲ್ಲಿ ವಾಸಿಸುತ್ತಿರುವಂಥ ಸಂದರ್ಭದಲ್ಲಿ ಹುಡ್ಕೋ ಸಂಸ್ಥೆಯಿಂದ ಸಾಲ ಪಡೆದು ಮನೆಗಳನ್ನು ಕಟ್ಟಿ ಅವರಿಗೆ ವಾಸಕ್ಕೆ ಮನೆಗಳನ್ನು ಬಿಟ್ಟುಕೊಡುವುದರ ಜೊತೆಗೆ ಸಾಲ ಮರುಪಾವತಿ ಮಾಡುವಂಥ ವಿಚಾರ ಮತ್ತು ಮಂಡಳಿಯ ಕಾರ್ಯವ್ಯಾಪ್ತಿ ಜಾಸ್ತಿಯಾಗುತ್ತಿರುವುದರಿಂದ ಆಯುಕ್ತರ ಒಂದು ಹುದ್ದೆ ಅಗತ್ಯ ಎಂದು ನಾವು ಮಾಡಿದ್ದೇವೆ. ಅದು ತಮಗೂ ಗೊತ್ತಿದೆ.ಈಗ ಬೇರೆ ಬೇರೆ ಕಾರ್ಯಕ್ರಮದಡಿಯಲ್ಲಿ ನಾವು ಹುಡ್ಕೋದಿಂದ ಸಾಲವನ್ನು ಪಡೆದು ಅದರ ಮರುಪಾವತಿ ಮಾಡುವಂಥದ್ದು, ಮನೆಯನ್ನು ಕಟ್ಟುವಂಥದ್ದು, ನಿವೇಶನ ಮಾಡುವಂಥದ್ದು, ರಸ್ತೆಗಳನ್ನು ಅಭಿವೃದ್ಧಿ ಪಡಿಸುವುದಕ್ಕೆ, ದೀಪಗಳನ್ನು ಹಾಕುವಂಥದ್ದಕ್ಕೆ, ಹೀಗೆ ಕಾರ್ಯವ್ಯಾಪ್ತಿ ಮಂಡಳಿಯದು ಜಾಸ್ತಿಯಾಗಿರುವುದರಿಂದ ಇವೆಲ್ಲ ಒಬ್ಬ ಕಾರ್ಯದರ್ಶಿಗೆ ಹೊರೆಯಾಗುವಂಥದ್ದು ಎಂದು ತಿಳಿದು ಒಬ್ಬ ಆಯುಕ್ತರ ಹುದ್ದೆಯನ್ನೂ ಸೃಷ್ಟಿ ಮಾಡುತ್ತಿದ್ದೇವೆ. ಕಾರಣ ಏನು ಎಂದು ಹೇಳಿದರೆ ಸ್ವಲ್ಪ ಚುರುಕಾಗಿ ನಮ್ಮ ಕೊಳಚೆ ಪ್ರದೇಶದ ಕಾರ್ಯಕ್ರಮಗಳು ಯಶಸ್ವಿಯಾಗಲಿ ಎನ್ನುವ ಉದ್ದೇಶದಿಂದ ನಾವು ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಿದ್ದೇವೆ. ಇದರ ಜೊತೆಗೆ ತಾವು ಹೇಳಿದ್ದೀರಿ......

ಶ್ರೀ ಎಸ್.ಎಸ್. ಪಾಟೀಲ್:- ಈಗ ಒಂದು ಹಂತ ಇದೆ. ಈಗ ಏನಾದರೂ ಇದ್ದರೆ ಕಾರ್ಯದರ್ಶಿಯೇ ಮಂಜೂರು ಮಾಡುತ್ತಾರೆ. ಮತ್ತೆ ಎರಡು ಹಂತ. ಮತ್ತೆ ಅವರಿಲ್ಲ, ಇವರಿಲ್ಲ ಎಂದು ಹೇಳಿ ಮತ್ತೆ 15 ದಿವಸ ಮುಂದಕ್ಕೆ ಹೋಗುತ್ತದೆ. ಇಷ್ಟೇ ಹೊರತು ಅದರಿಂದ ಏನೂ ಉಪಯೋಗವಾಗುವುದಿಲ್ಲ. ಆದುದರಿಂದ ಖಂಡಿತವಾಗಿ ತಾವು ದಯವಿಟ್ಟು ಅದನ್ನು ಹಿಂದಕ್ಕೆ ತೆಗೆದುಕೊಳ್ಳಿ.

ಶ್ರೀ ಡಿ.ವಿ. ಸದಾನಂದಗೌಡ:- ತಾವು ತಿಂಗಳಿಗೆ 300 ರೂಪಾಯಿಗಳಂತೆ ಹದಿನೈದು ವರ್ಷಗಳ ಕಾಲ ಅವರು ಕಟ್ಟಬೇಕು ಎಂದು ಹೇಳಿದ್ದೀರಿ. ಇವೊತ್ತಿನ ಪರಿಸ್ಥಿತಿಯಲ್ಲಿ ತಿಂಗಳಿಗೆ 300 ರೂಪಾಯಿಗಳನ್ನು ಕಟ್ಟುವುದಕ್ಕೆ ಖಂಡಿತ ಆಗುತ್ತಾ ಇಲ್ಲ. ಇನ್ನು ಮುಂದಿನ ಪರಿಸ್ಥಿತಿಗಳು ಹೇಗೆ ಎನ್ನುವುದು ಗೊತ್ತಿಲ್ಲ. ದಯವಿಟ್ಟು ಅದರ ಬಗ್ಗೆ ತಾವು ಪರಿಶೀಲನೆ ಮಾಡುವುದು ಒಳ್ಳೆಯದು. ಸ್ವಲ್ಪ ಕಡಿಮೆ ಮಾಡಿದರೆ ಅವರಿಗೆ ಹಣ ಕಟ್ಟಲು ಅನುಕೂಲವಾಗುತ್ತದೆ.

ಶ್ರೀ ಸಿ.ಆರ್. ಸಗೀರ್ ಅಹಮದ್:- ಮಾನ್ಯ ಅಧ್ಯಕ್ಷರೆ, ಮನೆ ಕಟ್ಟುವಂಥ ಜಾಗಗಳನ್ನು ನಾವು ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಬೆಂಗಳೂರು ನಗರದಲ್ಲಿ ಒಂದು ಮನೆ ಕಟ್ಟಬೇಕೆಂದರೆ ಇವತ್ತಿನ ಒಂದು ಅಂದಾಜಿನ ಪ್ರಕಾರ 60 ಸಾವಿರ ರೂಪಾಯಿ ಬೇಕಾಗುತ್ತದೆ. ಹುಬ್ಬಳ್ಳಿ-ಧಾರವಾಡ, ಬೆಳಗಾಂ ಪ್ರದೇಶದಲ್ಲಿ ಮನೆ ಕಟ್ಟಬೇಕೆಂದರೆ 40 ಸಾವಿರ ರೂಪಾಯಿ ಬೇಕಾಗುತ್ತದೆ. ಸಣ್ಣ ಪಟ್ಟಣಗಳಾದ ಚಿಕ್ಕಮಗಳೂರು ಇರಬಹುದು, ಶಿವಮೊಗ್ಗ ಇರಬಹುದು, ಅಂಥ ಪಟ್ಟಣಗಳಲ್ಲಿ

ಮನೆ ಕಟ್ಟಬೇಕೆಂದರೆ ಹೆಚ್ಚು ಕಡಿಮೆ 30 ಸಾವಿರ ರೂಪಾಯಿಬೇಕಾಗುತ್ತದೆ. ಆದುದರಿಂದ ಆ ಮನೆಯ ವೆಚ್ಚಕ್ಕೆ ತಕ್ಕಂತೆ ವಸೂಲಾತಿಯನ್ನು ನಾವು ನಿಗಧಿ ಪಡಿಸಬೇಕಾಗುತ್ತದೆ. ಆದುದರಿಂದ ಬೆಂಗಳೂರು ನಗರದಲ್ಲಿ ಕಟ್ಟುವ ಮನೆ ಪ್ರಾಯಶಃ 60 ಸಾವಿರ ರೂಪಾಯಿಗಳಿಗಿಂತ ಕಡಿಮೆ ವೆಚ್ಚದಲ್ಲಿ ಕಟ್ಟುವುದಕ್ಕೆ ಆಗುವುದಿಲ್ಲ. ಆದುದರಿಂದ ಸರ್ಕಾರ ಪ್ರತಿದಿನ ಒಬ್ಬನಿಗೆ ಸೂರನ್ನು ಒದಗಿಸಿಕೊಡುತ್ತದೆ ಅಂದಾಗ ಅವನಿಗೆ ಹತ್ತು ರೂಪಾಯಿಗಳನ್ನು ಪಾವತಿ ಮಾಡುವುದಕ್ಕೆ ಕಷ್ಟ ಆಗುತ್ತದೆ ಎಂದು ಹೇಳಿದರೆ ಹೇಗೆ? ಇವೊತ್ತು ತಮಗೆಲ್ಲರಿಗೂ ತಿಳಿದ ಹಾಗೆ ದಿನಕ್ಕೆ 10 ರೂ.ಗಳ ಲೆಕ್ಕಾಚಾರದಲ್ಲಿ ತಿಂಗಳಿಗೆ 300 ರೂಪಾಯಿ ಕಟ್ಟುವುದಕ್ಕೆ ಸಾಧ್ಯತೆ ಇದೆ. ಏಕೆ ಎಂದು ಹೇಳಿದರೆ ಈಗ ತಾವೇ ಹೇಳಿದ ಹಾಗೆ ಮಧ್ಯವರ್ತಿಗಳು, ಯಾರದೋ ಹೆಸರಿನಲ್ಲಿ ಮನೆ ಮಾಡಿಕೊಂಡು ಯಾರಿಗೋ ಬಾಡಿಗೆಗೆ ಕೊಟ್ಟು, ಆ ಬಾಡಿಗೆ ಸರಿಯಾಗಿ ಮಾಹೆಯಾನ ಕೊಡುತ್ತಾನೆ ಎಂದು ಹೇಳುವುದಾದರೆ ಅದು ಮಧ್ಯವರ್ತಿಗಳ ಕಾಟದಿಂದ ಎಂದು ಆಗುತ್ತದೆ. ಆದರೆ ಈ ಕಾನೂನಿನಡಿಯಲ್ಲಿ ತಮಗೆಲ್ಲರಿಗೂ ತಿಳಿದ ಹಾಗೆ ತಾವು ಸಲಹೆ ಸೂಚನೆಗಳನ್ನು ನೀಡಿದಂತೆ ಒಂದು ಭಾವಚಿತ್ರ ಅಳವಡಿಸುವುದರ ಮೂಲಕ ಹದಿನೈದು ವರ್ಷಗಳ ಕಾಲ ಮನೆಯನ್ನು ಪರಭಾರೆ ಮಾಡಕೂಡದು ಎಂದು ಕಾನೂನಿನ ಚೌಕಟ್ಟಿನಲ್ಲಿ ನಾವು ಕೊಟ್ಟಾಗ, ಅದೂ ಒಳ್ಳೆಯ ಮನೆಯನ್ನು ಕಟ್ಟಿಸಿಕೊಡುತ್ತೇವೆ ಎಂದು ಹೇಳಿದಾಗ 300 ರೂಪಾಯಿಗಳನ್ನು ಕಟ್ಟುವುದಕ್ಕೆ ಪ್ರಾಯಶಃ ಫಲಾನುಭವಿಗಳಿಗೆ ಹೊರೆಯಾಗುವುದಿಲ್ಲವೆಂಬುದು ನನ್ನ ಭಾವನೆ. ಎರಡನೆಯದಾಗಿ, ಈ ಆಯುಕ್ತರ ಹುದ್ದೆಯನ್ನು ಏಕೆ ಸೃಷ್ಟಿ ಮಾಡುತ್ತಿದ್ದೀರಿ ಎಂದು ನಮ್ಮ ಕಾರ್ಯದರ್ಶಿಗಳನ್ನು ಕೇಳಿದಾಗ ಏನೀಗ ಕಾರ್ಯದರ್ಶಿ ಹುದ್ದೆ ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಯಲ್ಲಿ ಏನಿದೆ ಆ ಹುದ್ದೆಗೆ ಮುಂಬಡ್ತಿಯನ್ನು ನೀಡುವುದರ ಮುಖಾಂತರ ಆ ಹುದ್ದೆಗೆ ಆಯುಕ್ತರು ಎಂದು ಹೇಳಿ ಹೆಸರನ್ನು ಇಡುತ್ತೇವೆಯೇ ವಿನಃ ಬೇರೇನೂ ಇಲ್ಲ. ಕಾರ್ಯದರ್ಶಿ ಹುದ್ದೆಗೆ ಮುಂಬಡ್ತಿಯನ್ನು ನೀಡುತ್ತಿದ್ದೇವೆ.

ಶ್ರೀ ಎಸ್.ಎಸ್. ಪಾಟೀಲ್:- ಇಂಗ್ಲೆಂಡ್ ಅಮೆರಿಕಾಗಳಲ್ಲಿ ಕಾರ್ಯದರ್ಶಿ ಹುದ್ದೆಯೇ ದೊಡ್ಡದಿರುತ್ತದೆ. ಅಲ್ಲಿ ಮಂತ್ರಿಗಳು ಎಂದು ಹೇಳುವುದಿಲ್ಲ. ಅಲ್ಲೆಲ್ಲಾ ಕಾಯದರ್ಶಿ ಎಂದು ಹೇಳುತ್ತಾರೆ. ದೊಡ್ಡ ಹುದ್ದೆ ಅದು.

ಶ್ರೀ ಸಿ.ಆರ್. ಸಗೀರ್ ಅಹಮದ್:- ಕಾರ್ಯದರ್ಶಿ ಬದಲಾಗಿ ಆಯುಕ್ತ ಎಂದು ಮಾಡಿದ್ದೇವೆ ಸ್ವಾಮಿ. ಸೆಕ್ರೆಟರಿ ಬದಲಾಗಿ ಕಮಿಶನರ್ ಎಂದು ಮಾಡುತ್ತಿದ್ದೇವೆ. ಈಗ ಕಾರ್ಯದರ್ಶಿ ಇಲ್ಲ ಎನ್ನುವ ವಿಚಾರದಲ್ಲಿ ಅವನ ಹೆಸರಿನ ಬದಲಾಗಿ ಆಯುಕ್ತ ಎಂದು ಮಾಡುತ್ತಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಸದರಿ ಇರುವವರಿಗೆ ಗೇಟ್ ಪಾಸ್ ಕೊಡಬೇಡಿ.

ಶ್ರೀ ಸಿ.ಆರ್. ಸಗೀರ್ ಅಹಮದ್:- ಆಗಬಹುದು, ಆಗಬಹುದು. ಈಗ ಎಲ್ಲಾ ಸದಸ್ಯರಿಗೆ ತಿಳಿದಿರುವಂಥ ವಿಚಾರ. ಈಗ ತಮ್ಮೆಲ್ಲರ ಆಸೆ ಏನು ಎಂದರೆ ರಾಜ್ಯದಾದ್ಯಂತ ಕೊಳಚೆ ಪ್ರದೇಶಗಳ ಅಭಿವೃದ್ಧಿಯಾಗಬೇಕು. ಆ ನಿವಾಸಿಗಳಿಗೆ ಸೂರು ಒದಗಿಸಿಕೊಡುವುದರ ಜೊತೆಗೆ ನಾವು ಇದಕ್ಕೆ ಸೌಲಭ್ಯಗಳನ್ನು ಒದಗಿಸಿಕೊಡಬೇಕು ಎನ್ನುವ ವಿಚಾರದಲ್ಲಿ ಎಲ್ಲರಿಗೂ ಆಸಕ್ತಿ ಇದೆ. ಉತ್ತಮವಾದಂತಹ ವಿಚಾರವನ್ನು ಇವತ್ತು ಸರ್ಕಾರ ರಾಜ್ಯಾದ್ಯಂತ ಹಮ್ಮಿಕೊಂಡಿದೆ. ಇನ್ನು ನಾನ್ ಅಫಿಷಿಯಲ್ ಮೆಂಬರ್ಸ್ ಬಗ್ಗೆ ತಾವು ಕೊಟ್ಟಿರುವಂತಹ ಸಲಹೆ....

ಶ್ರೀ ಎಸ್.ಎಸ್. ಪಾಟೀಲ್:- ಇದನ್ನು ಇನ್ನೊಂದು ಸಾರಿ ತೆಗೆದುಕೊಂಡು ಪರಿಶೀಲನೆ ಮಾಡಿ. ಇದೊಂದು ಒಳ್ಳೆಯ ಸಲಹೆ, ಅದನ್ನು ತಿರಸ್ಕಾರ ಮಾಡಬೇಡಿ.

ಶ್ರೀ ಸಿ.ಆರ್. ಸಗೀರ್ ಅಹಮದ್:- ಹಿಂದಿನ ಕಾಯಿದೆಯಲ್ಲಿ ಒಂಭತ್ತು ಜನ ನಾನ್ ಅಫಿಷಿಯಲ್ ಸದಸ್ಯರಿರಬೇಕೆಂದು ಇತ್ತು. ಅದನ್ನು ಕಡಿಮೆ ಮಾಡಿ ಐದು ಜನ ಮಾಡಬೇಕು ಎಂದು ಕಾನೂನಿಗೆ ತಿದ್ದುಪಡಿ ತಂದಿದ್ದೇವೆ. ನಾನು ಎಲ್ಲಾ ಗೌರವಾನ್ವಿತ ಸದಸ್ಯರಲ್ಲಿ ಈ ಕೊಳಚೆ ನಿರ್ಮೂಲನ ಮಂಡಲಿಯ ಕಾಯಿದೆಗೆ ತಿದ್ದುಪಡಿ ತಂದಿರುವುದಕ್ಕೆ ಒಪ್ಪಿಗೆ ಕೊಡಬೇಕೆಂದು ವಿನಂತಿಸುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ:- ಇನ್ನು ಮುಂದೆ ಸ್ಲಂ ಜಾಸ್ತಿಯಾಗದ ಹಾಗೆ ಸದನಕ್ಕೆ ಖಚಿತವಾಗಿ ತಿಳಿಸಲಿಲ್ಲ ಎಂದು ನಮ್ಮ ಮೇಲೆ ಜವಾಬ್ದಾರಿ ಹಾಕಿದಿರಿ. ಜೊತೆಗೆ ಇವತ್ತು ಡಿಕ್ಲೇರ್ಡ್ ಸ್ಲಮ್ಸ್.......

ಶ್ರೀ ಡಿ.ಬಿ. ಚಂದ್ರೇಗೌಡ:- ತೆಲುಗಿನಲ್ಲಿ ಒಂದು ಮಾತು ಇದೆ. ರೆಡ್ಡಿ ವಚ್ಚಿಂದಾರು ಮೊದಲಿನಿಂದ ಚೊಪ್ಪು ಎಂದು ನೀವು ಆಚೆ ಹೋಗಿ, ಮತ್ತೆ ಇಲ್ಲಿಗೆ ಬಂದು ಮಾತನಾಡುತ್ತಿದ್ದೀರಿ.

ಶ್ರೀ ಬಿ.ಎನ್. ಬಚ್ಚೇಗೌಡ:- ನಾನು ಇಲ್ಲಿ ಮಾನ್ಯ ದೇಶಪಾಂಡೆಯವರ ಹತ್ತಿರ ಇದ್ದೆ. ಆಚೆ ಎಲ್ಲೂ ಹೋಗಿರಲಿಲ್ಲ. 1804 ಸ್ಲಮ್ಸ್ ಏನು ಡಿಕ್ಲೇರ್ಡ್ ಎಂದು ಹೇಳಿದ್ದೀರಿ, ಅನ್ ಡಿಕ್ಲೇರ್ಡ್ ಸ್ಲಮ್ಸ್‌ನ್ನು ಹತ್ತಾರು ವರ್ಷದಿಂದ ಡಿಕ್ಲೇರ್ ಮಾಡಲಿಲ್ಲ. ಅದಕ್ಕೆ ಸಿಗುವಂತಹ ಸವಲತ್ತು ಇದಕ್ಕೆ ಸಿಗುವುದಕ್ಕೆ ಸಾಧ್ಯವಿಲ್ಲ. ಅದನ್ನು ಯಾವಾಗ ಮಾಡುತ್ತೀರಿ ಎಂದು ತೀರ್ಮಾನ ಮಾಡತಕ್ಕಂಥಾದ್ದು ಮುಖ್ಯ. ಮತ್ತು ಖಚಿತವಾಗಿ ಮುಂದೆ ಸ್ಲಮ್ಸ್ ಬೆಳೆಯುವುದಕ್ಕೆ ಅವಕಾಶ ಕೊಡುವುದಿಲ್ಲವೆಂದು ತಮ್ಮ ಕಡೆಯಿಂದ ಬರಬೇಕು.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೆ, ಈಗ ತಾವೇನಾದರೂ ಫಂಡ್ಸ್ ಅನ್ನು ಹೆಚ್ಚಿಗೆ ತೆಗೆದುಕೊಳ್ಳುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳಿಗೆ ಪ್ರೆಷರ್ ಮಾಡಿ ಪ್ರಯತ್ನ ಮಾಡುತ್ತೀರಾ? ಇದಕ್ಕೆ ನೀವು 60 ಕೋಟಿ ರೂಪಾಯಿ ಏನು ಹೇಳಿದ್ದೀರಿ, ಅದು ಸಾಲುವುದಿಲ್ಲ. ಸ್ವಲ್ಪ ಒತ್ತಡ ತೆಗೆದುಕೊಂಡು ಬಂದು ಹೆಚ್ಚಿನ ಹಣ ಬಿಡುಗಡೆ ಮಾಡುವಂತಹ ವಿಚಾರ ಮಾಡಿ.

ಶ್ರೀ ಸಿ.ಆರ್. ಸಗೀರ್ ಅಹಮದ್:- ನಾನು ಪ್ರಾರಂಭದಲ್ಲಿ ಹೇಳಿದೆ, ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ, ಈ ಹಣ ಸಾಲುವುದಿಲ್ಲ ಎಂದು. ಆದರೆ ಉಳಿದಿರುವಂತಹ ಕೊಳಚೆ ಪ್ರದೇಶದ ಅಭಿವೃದ್ಧಿಗೋಸ್ಕರ ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ಸಹಾಯದೊಂದಿಗೆ ನಮ್ಮ ಪ್ರಸ್ತಾವನೆ ಸಲ್ಲಿಸುವುದರ ಮುಖಾಂತರ ಅದನ್ನು ಅಭಿವೃದ್ಧಿ ಪಡಿಸುವುದರ ಬಗ್ಗೆ ನಮ್ಮ ಚಿಂತನೆ ಇದೆ. ಇನ್ನು ಎರಡನೆಯದಾಗಿ ತಾವು, ಕೊಳಚೆ ಪ್ರದೇಶಗಳು ಬೆಳೆಯದಂತೆ ನೋಡಿಕೊಳ್ಳುವುದರ ಬಗ್ಗೆ ಏನು ಮಾಡುತ್ತೀರಿ ಎಂದು ಕೇಳಿದಿರಿ. ಇದರ ಬಗ್ಗೆ ನಾನು ಎಲ್ಲಾ ಸದಸ್ಯರಲ್ಲಿ ವಿನಂತಿಸಿಕೊಳ್ಳುವುದಿಷ್ಟೆ, ಇದು ಕೇವಲ ಸರ್ಕಾರದ ಜವಾಬ್ದಾರಿ ಒಂದೇ ಅಲ್ಲ. ಸದಸ್ಯರೆಲ್ಲರೂ ಸಹ ಸಹಕಾರ ಕೊಟ್ಟಾಗ ಇಂತಹ ಕೊಳಚೆ ಪ್ರದೇಶಗಳು ಬೆಳೆಯದೆ ಇರುವುದಕ್ಕೆ, ಅವುಗಳನ್ನು ತಡೆಯುವುದಕ್ಕೆ ಸಾಧ್ಯವಾಗುತ್ತದೆ. ಆದುದರಿಂದ ತಮ್ಮ ಸಹಕಾರವನ್ನು ಬಯಸುತ್ತಿದ್ದೇನೆ. ಇನ್ನೊಂದು ವಿಚಾರ ಮಾನ್ಯ ಸದಸ್ಯರು ಹೇಳುವಂತಾದ್ದು ಏನೆಂದರೆ ಮನೆಗಳನ್ನು ನೋಂದಾಯಿಸಿಕೊಳ್ಳುವಂತಹ ಸಂದರ್ಭದಲ್ಲಿ ಸ್ಟಾಂಪ್ ಡ್ಯೂಟಿ ಎಗ್ಸೆಂಶನ್ ಕೊಡುತ್ತೀರಾ ಎಂದು ಕೇಳಿದ್ದೀರಿ. ಈಗ ಹೊಸದಾಗಿ ಏನು ಯೋಜನೆಯನ್ನು ಅಸ್ತಿತ್ವಕ್ಕೆ ತರುತ್ತಿದ್ದೇವೆ ಅದಕ್ಕೆ ವಿನಾಯಿತಿಯನ್ನು ಕೊಡುವುದರ ಬಗ್ಗೆ ನಾವು ಕಾನೂನು ಬದ್ಧವಾಗಿ ತೀರ್ಮಾನ ತೆಗೆದುಕೊಂಡು ವಿನಾಯಿತಿಗೆ ಆಲೋಚನೆ ಮಾಡುತ್ತೇವೆ.

ಅಧ್ಯಕ್ಷರು:- ಪ್ರಸ್ತಾವ ಏನೆಂದರೆ. "ಕರ್ನಾಟಕ ವಿಧಾನಪರಿಷತ್ತಿನಿಂದ ಅಂಗೀಕೃತ ರೂಪದಲ್ಲಿ 2002ರ ಕರ್ನಾಟಕ ಕೊಳಚೆ ಪ್ರದೇಶಗಳ (ಮೇಲ್ಪಾಟು ಮತ್ತು ನಿರ್ಮೂಲನ) ಮತ್ತು ಇತರ ಕೆಲವು ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 4 ರವರೆಗೆ, ಎರಡೂ ಸೇರಿದಂತೆ

ಅಧ್ಯಕ್ಷರು:- "ಖಂಡ 2 ರಿಂದ 4 ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 4 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು:- ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ದೀರ್ಘಶೀರ್ಷಿಕೆ, ಪ್ರಸ್ತಾವನೆ ಹಾಗು ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಸಿ.ಆರ್. ಸಗೀರ್ ಅಹಮದ್ (ವಸತಿ ಸಚಿವರು):- ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಧಾನಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2002ರ ಕರ್ನಾಟಕ ಕೊಳಚೆ ಪ್ರದೇಶಗಳ (ಮೇಲ್ಪಾಟು ಮತ್ತು ನಿರ್ಮೂಲನ) ಮತ್ತು ಇತರ ಕೆಲವು ಕಾನೂನುಗಳ(ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು:- "2002ರ ಕರ್ನಾಟಕ ಕೊಳಚೆ ಪ್ರದೇಶಗಳ (ಮೇಲ್ಪಾಟು ಮತ್ತು ನಿರ್ಮೂಲನ) ಮತ್ತು ಇತರ ಕೆಲವು ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು. ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಪರ್ಯಾಲೋಚನಾ ಪ್ರಸ್ತಾವ

ಇ) ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕ 2002

ಶ್ರೀ ಡಿ.ಬಿ. ಚಂದ್ರೇಗೌಡ(ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೆ, "ಕರ್ನಾಟಕ ವಿಧಾನಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2002ನೇ ಸಾಲಿನ ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ಅಧ್ಯಕ್ಷರೆ, ಕರ್ನಾಟಕ ನ್ಯಾಯವಾದಿಗಳ ಕಲ್ಯಾಣನಿಧಿ, ಈ ವಿಧೇಯಕ ಮೇಲ್ಮನೆಗೆ ಹೋಗಿ ಪಾಸ್ ಆಗಿ ಬರಬೇಕು. ಅದಕ್ಕೆ ಕೆಲವು ಅಮೆಂಡ್‌ಮೆಂಟ್ಸ್ ತಂದಿದ್ದೇವೆ. ಇದು ಪ್ರಧಾನವಾಗಿ ವಕೀಲರುಗಳ ಸಮಸ್ಯೆಯನ್ನು ಪರಿಹಾರ